ನರಹರಿಯವತರಿಸೆ ಬಲಂ |
ಪರಿದುದಡಂಗಿದುದು ಬೀರಮಳಿದುದು ಧೈರ್ಯಂ ||
ಸುರರೆಂದರ್ಪಿಪರಸುರರ್ |
ಸಿರಿಯುಂ ಬಂದಂಗೆ ಮುಡಿವನೀಕ್ಷಿಪನೆ ಜಪಂ ||೨೨೯||

೯೨ ವಕ್ರೋಕ್ತಿ.

ವಿಪರೀತಬುದ್ಧಿಯಿದನೇಂ |
ಸುಪಯೋಧರೆ ನಿನಗೆ ನೃಹರಿಮಿತ್ರನದೆನ್ನೊಳ್ ||
ವಿಪರೀತಾದಿಗಳೆಂತು ಕು |
ಲಪತ್ನಿಗೆ ತಿಳಿದಪುವರಿಯುವಂ ವೇಶ್ಯೆಯರೊಳ್ ||೨೩೦|| 1
ತರಳನೆ ಅಸುರರ್ ಸ್ಥಿರರಿಂ |
ಹರಿಯರಿ ಯಸಮರ್ಥನಮರರಂ ಕಾವೊಡವಂ ||
ನರಗೇನೆ ವಿಪದಂ ಸಿದ್ಧಂ |
ಕಿರಿದುಮೃತಮುಮಕ್ಕೆ ಪಂಚಮಹಾಕ್ಷರಮುಳಿ ನೀಂ ||೨೩೧|| 2
ಜಲಶೀರ್ಷನೆತ್ತಲರಿಗುಂ |

1 ಶಬ್ದಶ್ಲೇಷಮೂಲ—ಅವಿಕೃತ 2. ಶಬ್ಧಶ್ಲೇಷಮೂಲ-ವಿಕೃತ.

ಜಲಾಶನಂ ಗಿರಿಯುದೆತ್ತಲಾವನೊ ಬೆನ್ನೊಳ್ ||
ತಳೆದಂ ಶಬರನೊ ದಂಷ್ಟ್ರಿಯೊ |
ತಿಳಿಗುಂ ಘೋರನೊ ಮೃಗೇಂದ್ರವಕ್ತ್ರನೆ ಬಲ್ಲಂ ||೨೩೨|| 1
ಪತಿಯೆನಲಕಾರಣಂ ತ್ವ |
ತ್ಪ್ರತಿಘಂ ಬಿಡಯುಕ್ತಮಿದಿದಯುಕ್ತಮೆಯೆನೆ ||
ನ್ನುತೆ ಮಾಲೆಯಿಂದ ಪೊಡೆದಳ್ |
ಸತಿ ಶಾಂತತೆಯೀಗೆ ನೃಹರಿ ಪೆಣ್ಗಳ್ಗನಿಶಂ||೨೩೪|| 2

೯೩ ಸ್ವಭಾವೋಕ್ತಿ.

ತನುಸುಸ್ತಬ್ಧಮೆನಲ್ಕಾ ||
ದನುಜನನೀಕ್ಷಿಸುತೆ ನಟ್ಟದಿಟ್ಟಿಯಿನಾಗಳ್ ||
ತನತಂಕದೆ ತಾಳ್ದಿತುಡುಕು |
ತೆ ನೃಹರಿ ಕಿಳ್ತೊಡೆವಿದಾರಿಪಂ ಕುಡುಗೊಳ್ವಂ ||೨೩೯||

೯೪ ಭಾವಿಕ.

ಎನಗಿನ್ನುಂ ಪ್ರತ್ಯಕ್ಷಂ |
ದನುಜರಿನಾಬಾಲಹಿಂಸೆ ಮಡಿಪುಕ್ತಿ ಸರಣ್ ||
ಎನುತವನ ಸ್ತುತಿ ಭೀಕರ |
ತನುವಿಂ ನೃಹರಿಯುವತಾರಮೆಲ್ಲಂ ಕಾಣ್ಗುಂ ||೨೩೫||

೯೫ ಉದಾತ್ತ.

ಇದು ಭಕ್ತಂ ಪ್ರಹ್ಲಾದಂ |
ನೊದಲೊಳ್ ಜನಿಗೊಂಡ ಸರವಧಿನ್ನಾಯಸ್ತಂ ||
ಭದಸುರಶಾಖಿಸುಮಾಸಾ |
ರದ ಲಕ್ಷ್ಮೀ ನೃಹರಿಶುಭಸಮಾಗಮುದೆಸೆ ತಾಂ ||೨೩೬|| 3
ಇರಲಾ ಪೊಸ್ತಿಲೊಳಂದು ನೃ |
ಹರಿ ರತ್ನಸ್ತಂಭಕುಡ್ಯಬಿಂಬಾವೃತನಾ ||

1 ಅರ್ಥಶ್ಲೇಷಮೂಲ. 2 ಕಾಕುಮೂಲ. 3 ಶ್ಲಾಘ್ಯಚಾರಿತಾಂಗ.

ಸುರರದಸಂಖ್ಯಾತದ ಪದಿ |
ವರಿಜಿಂ ತನ್ಮೂರ್ತಿಯರಿದಪರ್ ಕೃಚ್ಛ್ರದವರ್ ||೨೩೭|| 1

೯೬ ಅತ್ಯುಕ್ತಿ.

ಸುರಭೂಜಕೋಟಿಗಕ್ಕುಂ |
ನರಹರಿಭಕ್ತಾಂಘ್ರಿಧೂಳಿಕಣಮೂರವೆ ತಾಂ ||
ಸುರಧೇನುಬೃಂದಕಂ ತೃಣ |
ಭರದಂ ಚಿಂತಾಮಣಿಪ್ರಕರಪಾರ್ಗಂಕಿತಮುಂ ||೨೩೮||

೯೭ ನಿರುಕ್ತಿ.

ಜಗಕುದ್ಘೋಷಿಸಿ ನಾನಿಂ |
ತೊಗೆವೆಂ ನಿಜಭಕ್ತರಕ್ಷಣಕ್ಕೆನುತಿವ್ಮಂ ||
ದುಗಡದೊಳೊಳ್ದಿಪ್ಪ ಕತದೆ |
ಬಗೆವೆಂ ಪಂಚಾನನಂ ದಿಟಂ ನೀನೆನುತುಂ||೨೩೯||

೯೮ ಪ್ರತಿಷೇಧ

ಪೊಡೆ ಕಠಿನಮಾಂಸಸುರೆಯಿಂ |
ಡಿಡೆಯ ಕದುಷ್ಟಾಘುವೂನಮುನಿವಸೆಯಲ್ಲಂ |
ಕಡುಕೋಪದಿದಸುರನೆಜಗ |
ಮಡಬಡಿಪಾ ಪ್ರಾಯುವಗ್ನಿ ನೃಹರಿಸಮಾಖ್ಯಂ ||೨೪೦||

೯೯ ವಿಧಿ

..ಲ ..ದರ ಪರಾಸ್ತ್ರವಿದಂ |
ಸಲಪಲ್ಕೀಮೆಯ್ಯನುಣ್ಬುದಾನ್ಯಕರಿ ಕಟಾ ||
ಕ್ಷಲವಕಮದೆಡೆಯೆನಿಸದನೊ |
ಡಲಪ್ಪುಯುದಘಾನ್ನ ಮುಂಡ ನಿನಗೆತ್ತಣ ನಾಣ್ ||೨೪೧|

೧೦೦ ಹೇತು.

ಸುರರಾಜ್ಯಶ್ರೀವಿಭವಕೆ |
ನರಲೋಕವಿಭೂತಿಶಾಂತಿಧರ್ಮೋನ್ನತಿಗಾ ||

1 ಖುದ್ಧಿಮೂಲಂ.

ಉರಗಭಯಹೇತುತಮನಕೆ |
ನರಹರಿಯವತರಿಸಿ ಬದ್ಧಪರಿಕರನೆನಿಕುಂ ||೨೪೨|| 1
ನತಭಕ್ತಾಯುದರ್ಶನ |
ಪ್ರಥಿತೋತ್ಸವಮೂರ್ತಿಮಂತನನುರಜಯಾಹ್ಲಾ ||
ದದ ಜೀವಿತನುದ್ಯಮಧನ |
ನಿಧಿ ಜಯಿಪಂ ನೃಹರಿ ಯಮಿಹೃದಾನಂದಭರಂ ||೨೪೩|| 2

—— o ——

ಉಪಮಾದಿಪತ್ರಯುಕ್ತಾಶ |
ತಪತ್ರಬದ್ಧವಿದು ಮಾಲೆ ನಿನ್ನ ಕೊರಲ್ಗಿಂ ||
ತುಪಪನ್ನಮೆನಗೆ ನೃಹರಿ ನು |
ತಿಪೊಡಕ್ಕೆ ರಸಾದ್ಯಲಂಕೃತಿಯಿನುಂ ಮತಿ ತಾಂ||೨೪೪||

ರಸಾಲಂಕಾರಗಳು.

(೧) ರಸವತ್

ಮುನಿಯವನೆ ಮಹಾತ್ಮಂ ಯೋ |
ಗಸಿಧಿ ತಪೋರಾಶಿಯೊಂದೆ ಪುಳಕದೊಳಾವಂ ||
ಗೆ ನೃಹರಿಯ ಮೀನಕಚ್ಛಪ |
ತನವೆರಡುಂ ದೃಷ್ಟಮಾಸ್ತುಗಸ್ತ್ಯಂ ಪ್ರಥಿತಂ ||೨೪೫||
ನರಹರಿ ಮಿಡಿಪಲ್ಪತಿಯನ |
ಸುರಿಯಿದು ಕಯ್ಯೆನುತೆ ನೀವಿವಿಸ್ತಾರಗುಮುಡೆನೊಳ್ ||
ತೆರೆಗುಮುರೋಜಂ ಮದ್ದಿಕು |
ಮುರೆಯುಳ್ಳಳ್ಸ್ಪರ್ಶ ಜಘನ ನಾಭ್ಯೂರುಗಳಂ ||೨೪೬||

(೨) ಪ್ರೇಯಸ್.

ನರಹರಿ ಕಾಶಿಯೊಳೆಂದಾ |
ಸುರತಟಿನೀತೀರದೊಳ್ ಮನಸ್ಸಂಬದ್ಧತೆಯಿಂ ||
ನೆರೆದ ಬ್ರಹ್ಮಾನಂದದೆ |
ತೊರೆವೆನವಧೂತನಾಂ ಕಳೇಬರಮನಿದಂ ||೨೪ ||

1 ಪ್ರಥಮಭೇದ. 2 ದ್ವಿತೀಯಭೇದ.

ಗ್ರಹನಕ್ಷತ್ರಸಮಾಕುಲ |
ಮಹಿತಮುಜಾಂಡಮೆನಲೆಸಗಿ ದಾಶ್ಚರ್ಯಕರಂ ||
ನೃಹರಿಯೆ ವಾಗ್ಬಂಧಿಸುಗುಂ |
ಕುಹರಂ ತ್ವದುದರದ ಪಲವಿವಂ ಧರಿಸಿರೆಶಾಂ ||೨೪೮||

(೩) ಊರ್ಜಸ್ವಿ.

ನರಹರಿ ನೀನವತರಿಸಲ್ |
ಪಾದನಿಜಾವಸ್ಥೆಯರಿಯದಾ ಅಸುರಿಯರಂ ||
ನಿರುಕಿಸಿಕಾ ಡೊಳ್ ಪುಳಕಂ |
ಬಗೆತೊಟ್ಟಂಬನಿಡೆ ಮರೆದರಂದು ಕಿರಾತರ್ ||೨೪೯||
ನಿನತು ಜನಿದೈತ್ಯಹತಿಗೆಂ |
ದೆನುತರಿದುಂ ಸಫಲಮೆಮ್ಮ ಕಣ್ಗಳೆನುತ್ತುಂ ||
ದನುಜರ್ ಒಲಿಮುಖ್ಯರ್ ನಿ |
ನ್ನ ನೃಹರಿ ನುತಿಗಳೆ ಸಾದರರ್ ತೊಡಗಿದಪರ್ ||೨೫೦||

(೪) ಸಮಾಹಿತ.

ಸ್ಥಿರನಾಗೆ ನೃಹರಿ ಬಂದಳ್ |
ಸಿರಿಯೇವಳ್ನೋಳ್ವ ಮೆನುತವಳ್ ಮುಳಿಸಾಂತಳ್ ||
ಬರೆಯು ನೆನುತಿಂತಿರೆನಗಲ್ |
ನರಹರಿ ಸವ್ಯಾಜಮುಬಳೆ ಕಣ್ಬನಿಗರೆದಳ್ ||೨೫೧||

(೫) ಭಾವೋದಯ.

ರಿಪುಗಪಚಿಕೀರ್ಷಮನ ದಿಂ |
ದುಪಶಮಿತಂ ರಾಗಮುಳಿದುದಾ ವಿಷಯಸುಖಂ ||
ಅಪನೀತಮೆಂದು ನಿನತಾ |
ವಪ್ರವೊಂದೇ ನೃಹರಿ ನಿಲ್ವುದೋವುದು ಕೃಗೆಯಿಂ ||೨೫೨||

(೬) ಭಾವಸಂಧಿ.

ನೆಯನಯುಗಾಸೇ ಜನಕಂ |
ವಿನಯಚ್ಚರಜ್ಯೇಷ್ಠ ಚಿತ್ತಕಂದುಪಾಪ್ರಪಂ ||

ಕ್ಷಯರಹಿತಾನಂದಜಮುಂ ।
ತೆ ಯಥಾರ್ಥತ್ವಸ್ಯಜಂ ನೃಹರಿಯಾ ರೂಪಂ ॥೨೫೩॥

(೭) ಭಾವಶಬಲ.

ತ್ವರೆಯೇಕೆ ಹೃದಯ ದಿನಮೊಂ ।
ದರೊಳೀಂ ಧ್ರುವನರಿದನೀಕ್ಷಿಪಯ' ನರಹರಿಯುಂ ॥
ಅರಿದರ ನುಡಿಗೇಳುರಿ ಬಳ ।
ಸಿರೆಯು ಸೌಮ್ಯಂ ಮೊಗಮುದಲಭ್ಯಮು ಮರಗಲಂ ॥೨೫೪॥

ಪ್ರಮಾಣಾಲಂಕಾರಗಳು.

(೮) ಪ್ರತ್ಯಕ್ಷ.

ಧೃತಗಂಧಮೂಲ್ಯನಿಹೃತಿ ।
ನತತಪ್ತಸ್ವಾಂತಶೀತಲಂ ಜಿತವಿದ್ಯು ॥
ದ್ದ್ಯುತಿ ಪುಷ್ಟರಸಂ ನೃಹರಿಯ ।
ನುತಿ ಘುಷ್ಟಂ ತನುವೊಳಾಳ್ದ ದಿಂದ್ರಿಯುವರ್ಗಂ ॥೨೫೫॥
ಇದು ದೈತ್ಯಕುಲಾನಲತೇ ।
ಜದ ರಾಶಿಯೊ ನತತವೋಘ್ನನೃಹರಿಯೊ ಎನುತುಂ ॥೨೫೬॥
ಒದವಿರೆ ಸಂದೆಗವೊಂದೆಯು ।
ರದ ಕತದಿಂದೂರ್ಧ್ವಗತಿ ನೃಹರಿ ಯೆಂದೇ ತಿಳಿಗುಂ ॥

(೯) ಅನುಮಾನ.

ಪಸರಿಸೆ ಕಳ್ತಲೆವ್ರೋಗೆ ದತ ।
ದಿಶೆಗಳೊಳಂ ಮೆರೆಯೆ ತಾರಕಾಗ್ನಿಕಣಂಗಳ್ ॥
ಎಸೆಯೆ ನೃಹರಿಶಿಖಿ ದಿವಿಜ ।
ದ್ವಿಷರೊಡ್ಡಿಗೆ ಬಿಳ್ದುದರಿವೆನಗ್ನಿಯೆನುತ್ತುಂ ॥೨೫೭॥
ಪರಿಪೂರ್ಣಲಕ್ಷ್ಮಿಯಿಂದ್ಧೃಡ ।
ಶರೀರದಿಂದಧಿಕಬಲದೆ ಪೆಚ್ಚಿದ ಗೆಲವಿಂ ॥
ಪರಿವಾರಮಿತ್ರಬಂಧುಸು ।
ತರಿನರಿನೆನಿವಂಗೆ ನೃಹರಿ ಕರುಣೆಪನೆನುತುಂ ॥೨೫೮॥

(೧೦) ಉಪಮಾನ.

ನರಹರಿಯು ವಾಮಪಾರ್ಶ್ವದ ।
ಶರಳತ್ವಂ ಸ್ತ್ರೀಮನೋಜ್ಞರೂಪೋತ್ಕರ್ಷಂ ॥
ದೊರೆಕೊಂಡಿಪ್ಪುದು ನೋಡೆ ।
ಪರನಾಮಂ ಲೋಕಮಾತೆಯೆಂದರಿವುದು ಶ್ರೀಂ ॥೨೫೯॥
ಶರದಿಂದುವೊಲತಿಧವಳಂ ।
ತರಣಿಸಹಸ್ರಂಬೊಲಧಿಕತೇಜಂ ಮನದಂ ।
ತಿರೆ ಯಮಿಗಳ ಉರುಸೌಖ್ಯಂ ।
ನರಹರಿಯೆಂದರಿವೆನಾ ಜಗತ್ಪತಿಯುವನಂ ॥೨೬೦॥

(೧೧) ಶಬ್ದಪ್ರಮಾಣ.

ಸರಹಸ್ಯಮಲ್ಲದೊಡಮವ ।
ಸೊರೆದುದುರಿತ ಮುಕ್ತಿ ನೃಹರಿವಿಷಯಕಮೊಗೆದಂ ॥
ಒರೆಗುಂ ಶ್ರುತಿಯಾವನಿನಾ ।
ವಿರಾಜನುಂ ಪ್ರಮಿತಿಸಾಧ್ಯಮೆನಿಸಿದಪನವಂ ॥೨೬೧॥
ನರಹರಿ ರಕ್ಷಿಪನೀಷ ।
ದ್ದುರಿತದಿನೆನೆ ಪೊರೆವ ಧರ್ಮಕಾಶಿಶು ಸುತನಂ ॥
ಪೊರೆ ನಂಬಿದ ಸತಿಯುಂ ಪೃ।
ದ್ಧರನೆನ್ನುಂ ಮನುವಕಾರ್ಶ್ಯದಾನುಂ ಪಿತರಂ ॥೨೬೨॥
ಸರಣಿಯಿದನಾದಿ ಶಿಷ್ಟಾ ।
ಚರಿತಂ ಜ್ಞಾಪಕದಹೇತು ಬಿಂಬಮೆನುತ್ತಂ ॥
ತಿರೆಪರಮೊಂದೆನುತರಿದುಂ ।
ವರಪಂಚಾಯತನಪೂಜೆಗೆಯ್ದಪೆವೆನುತುಂ ॥೨೬೩॥
ನರಹರಿಯೆ ಪರಾತ್ಪರನೆಂ।
ದೊರೆದೊಡೆ ಹಿತಮಪ್ಪೊಡಂವ ನೆನಲ್ಕಲ್ಪಂ ॥
ಇರೆದಕ್ಕುಂ ವ್ಯಥೆ ಮನಕಾ ।
ದರಣೀಯುಮಭಿದದುಕ್ತಿಯುಮಗದರಿಂದಂ ॥೨೬೪॥

ಅತಿದುಃಖಮೆನಿಪ್ಪೀಸಂ |
ಸ್ಮೃತಿರೋಗಕೆ ಪೇಳ್ವುದೇಂ ಪ್ರಮಾಣಾಂತರಮುಂ ||
ಪ್ರತಿಕರ್ತೃ ನೃಹರಿ ಯೆನಲಾ |
ಶ್ರುತಿಯುವನಂ ಭಿಷಜರೊಳ್ ಭಿಷಕ್ತಮನೆನ್ನುಂ ||೨೬೫||
ಕರಣಾತೀತನೆನಲ್ಕಂ |
ಪರಪೂತ್ಮಂ ಶ್ರುತಿ ಯುಪಾಸಕಗೊರ್ಗೆಂದೆಡೆಯೊಳ್ ||
ಅರಿವುಗುಮಿತ್ಥಂಭೂತಂ |
ನರಹರಿ ವರ್ಣನದೆ ಲಿಂಗದಿಂದವನೆನುತುಂ ||೨೬೬||
ಜ್ವಲನ ನಿನತಾಸೆ ವಿಫಲಂ |
ನಿಲೀನಮೆಂತಕ್ಕುಮೆನ್ನ ವಾಕ್ಕದು ನಿನ್ನೊಳ್ ||
ನಲಿದವುದೆಂದುಂ ನೃಹರಿಯ |
ಸಲೆ ನುತಿಯಿಂದವನ ಭಾವಮುದರ್ಕಂತ್ಯದೊಳಂ ||೨೬೭||

(೧೨)ಅರ್ಥಾಪತ್ತಿ

ಪಿರಿದೆನೆ ಶಾಸ್ತ್ರಂ ಕಥೆಯಿಂ |
ನರಹರಿ ಕೊಲ್ದುದು ಹಿರಣ್ಯಕಶಿಪುವಸನ್ನೃತಂ ||
ಪೊರೆದುದುಮಾಪ್ರಹ್ಲಾದನ |
ನರಿಮಿತ್ರರವಂಗ ಮಿಪ್ಪರಲ್ಲದೊಡಲ್ತೇ ||೨೬೮||

(೧೩) ಅನುಪಲಬ್ಧಿ.

ಉಪಲಭ್ಯಮಾಗದುದರಿಂ |
ವಪುವಿಲ್ಲಂ ನಿನಗೆ ನಿಶ್ಚಿತಂ ನೃಹರಿಯುದೇ ||
ನುಪಕರಣಮುಸುರನನೆನೆ ಮ |
ರಿಸಲದು ಮಾಯೇಂದ್ರಜಾಲನಿರ್ಮಿತಮುರಿಸಂ ||೨೬೯||

(೧೪) ಸಂಭವ.

ಎನಗಿದ್ದರ್ದುಮುಂದುಃಖಂ |
ಜನಿಪ್ಪರ್ನ್ನೆವರಮಿನ್ನುಮಿಪ್ಪುದದಲ್ತೇ ||
ಅನುಭವಿಪೆ ನಾದೊಡಂ ಸ್ವೈ |

ತನುರೂಪವೆ ನಿನಗೆ ನೃಹರಿ ಸರಣೆನಲದು ಪೇಳ್ ‖ ೭೦‖

ಪರದೋಷಾವಿಷ್ಕರಣ್ಕೆ ।
ಕರತಗ್ಗಿರ್ದು ಯತ್ನಮಲ್ಲಮೆನ್ನಸಧರ್ಮರ್ ‖
ಇಗರೇ ನೊಗೆಯಿತೆ ನೃಹರಿಯೆ ।
ನಿರವಧಿ ಕಾಲಂ ಧರಿತ್ರಿ ವಿಪ್ಲುತಮುದರೆಬರ್ ‖೭೭‖

ಪರಹಿತಕೆಳಸಿದೊಡಂ ನಿ ।
ನ್ನೆರಮೀಪ್ಸ್ಯಾರ್ಲಕ್ಷ್ಯನೊಳನೆ ದುರ್ದೈವಹತಂ ‖
ನರಹರಿ ಸೃಷ್ಟಿಯಿದವಿತಂ ।
ಪರಿಪರಿಯಾಶ್ಚರ್ಯಮೆತ್ತಲಾನುಮದಿಕ್ಕುಂ ‖೭೭‖

(೧೫) ಐತಿಹ್ಯ.

ಜನಸಿದ್ಧಗಾಧೆ ಸೂಕ್ತಮಿ ।
ದೆನುತಿರ್ಕ್ಕುಂ ನೃಹರಿಯೆನಗೆ ನಂಬುಗೆ ಪೂರ್ಣಂ
ಮನುಜಂ ಜೀವದಿನಿರ್ದ್ದಪ ।
ನೆನಲಾನಂದಂ ಶತಾಬ್ದದಾನುಂ ಬರ್ಕ್ಕುಂ ‖೭೮‖

ಸಂಸೃಷ್ಟಿ ಸಂಕರ ಗಳು

(೧೬) ಸಂಸೃಷ್ಟಿ.

ಸುಮಸೌರಭಲೋಭಪರಿ ।
ಭ್ರಮದ್ಭ್ರಮರ ಶೋಭಿಶೋಭಿತೋದ್ಯಾನಪಥಂ‖
ಸುಮನಸ್ಸುಮನೋರಂಜಕ ।
ಸುಮಸಮಯಸಮೀರಣಂ ನೃಹರಿಯಂ ಹರಿಕುಂ ‖೭೪‖

ಪಸರಿಪನೊ ನೃಹರಿ ಚಂದನ ।
ದೆಸೆವಣ್ಪನೆನಲ್ ವಿಲೇಪಿಕುಂ ತತ್ಕಳೆ ವಲ್ ‖
ಅಸದೃಶಫಲಮೂದುದು ಕ ।
ಣ್ಗೆ ಸಾಧುಸಜ್ಜನರ ಸೇವೆಯಿಂದಂತಿರೆನ್ಪೊಲ್ ‖೭೫‖

ಸುಮನಸ್ತೋಮಂ ಮುಂಸಿರಿ ।
ಯು ಮಂಜು ಮಂಜೀರಶಿಂಜಿತಂ ನಾಂತ್ಸಿನಲು ‖

ದ್ಯಮಯಮುದಭ್ಯಸ್ತರುಪಾ |
ಶಮನೋಪಾಯದವೊಲಂದು ನೃಹರಿಗೆ ನಮಿಕುಂ ||೨೭೬||

(೧೭) ಅಂಗಾಂಗಿಭಾವಸಂಕರ.

ನೆರವಾನಂದದ ರಭಸದೆ |
ಪರಿಕಂಪಿತಮಲೆಗುಮಂದು ನೃತ್ಸ್ವಜ್ಞಾನಂ ||
ನರಹರಿಯಿಂದೆ ತಮೋ ||
ದ್ವಿರದಂಗಳಲೂನಗಾತ್ರಖಂಡಗಳವೊಲ್ ||೨೭೭||

(೧೮) ಸಮಪ್ರಾಧಾನ್ಯಸಂಕರ.

ತರಜಯದೆ ದಳಮನಂತಿರೆ |
ನಿರಸ್ತಭಂಗೆಯ್ಯೆ ತುಡುಗಳಂ ಜ್ವಾಲೆಯಿನಾ ||
ವರಿಪ ತಮೋದರ್ಪದ ಭೀ|
ಕರದ ಮಹಾಮೋಹಮಂ ನೃಹರಿಗೆಲ್ದಪನೋ ||೨೭೮||

(೧೯) ಸಂದೇಹಸಂಕರ.

ದೊರೆಯಲ್ಕಮೃತ ತಟಾಕಂ |
ವಿರಚಿತ ಹೃದ್ರೋಗ ಹರಶಿಲಾತತಿಬಂಧಂ ||
ನೆರೆ ಮುಚ್ಚಿಸಿ ಭವದುಃಖಮಿ |
ಪರಿಭೂತಂ ನೃಹರಿ ಶಾಂತನೊಮ್ಮೆಯದಪ್ಪೇ ||೨೭೯||

(೨೦) ಏಕವಾಚಕಾನು ಪ್ರವೇಶಸಂಕರ

ಅಮಿತಜ್ವಾಲಾಮಾಲಾ |
ಸಮಲಂಕೃತನಾತ್ತ ಚಕ್ರವಿಕ್ರಮನೆಮಗಾ ||
ಸುಮನಸ್ಸುಮನೋರಂಜಕ |
ನಪವರ್ಗಸುಮಾರ್ಗನೀಗೆ ನೃಹರಿಯದೊಳ್ಪಂ ||೨೮೦||

ಉಪಸಂಹಾರ.

ಹರಿಯೊಸೆಗುಮಲಂಕಾರದಿ |
ನೊರೆಗುಮೆನುತ್ತೆನ್ನೊಳೆಂತು ಭೂಷಾದಿಗಳೀ ||
ಪರಿಯಿಂ ಮತ್ಸಾಧ್ಯಮಲಂ |

ಕರಣಜಯಂ ನೃಹರಿ ನಿನಗಿದರ್ಪಿತಮೊಸೆ ನೀಂ ||೨೮೧||
ಕುಡಿದಂ ಕುಡದಂ ಕುಡುದಂ |
ಕುಡುಕುಡುಕುಡೆನುತ್ತೆ ನುತಿಪುದೆಲ್ಲರ್ ಸಾಜಂ ||
ಒಡೆಯ ತ್ವತ್ಪ್ರೀತಿಯದಿ |
ಪ್ಪೋರ್ಡದಿನ್ನೇಂ ಬೇಳ್ಪುದೆಮಗಮದೊಂದೆ ಸಮಸಂ ||೨೮೨||
ಅನುದಿನಮಿಷ್ಟವಿಯೋಗದಿ |
ನನಿಷ್ಟಸಂಪ್ರಬದ್ಧಿಯಿಂದಮದೆಂತುಂ |
ಮನಕಂಟಿದ್ದರ್ ಪರುಜೆಯುಂ |
ತನುಗತಮಿದನುಂ ನೃಹರಿ ವಿನಾಶಿಸು ಕೃಪೆಯಿಂ ||೨೮೩||
ಕಳದತ್ತಿನ್ನೆಳವೆಯದೀ |
ಗಳೆ ತಾರುಣ್ಯಕ್ಕೆ ಮೊದಲಿದಂ ಬಿಜ್ಜೆಯನಾಂ ||
ಗಳಿಪೆಂ ಪ್ರತ್ಯಯದಿಂಸಿ |
ನ್ಮೊಳೆಯೆ ನತಾಭಾವಿದಶೆಗೆ ವಿಭುನೀನೆ ಪವನ್ ||೨೮೪||
ಮತಿಲೇಶನಶಾಂತರಸಂ |
ಮಿತಲೋಕಜ್ಞಾನನಲ್ಪವಾಕ್ಕಪಟುವಲಂ ||
ಕೃತಿಯಿಂ ಯತ್ನಿಸಿದೆಂ ತ್ವ |
ತ್ಸ್ತುತಿಗಿಂ ನಿನಗಿಕ್ಕೆರ್ ನೃಹರಿ ತದ್ಭರಮೆಲ್ಲಂ ||೨೮೫||

|| ಭದ್ರಂ ಭೂಯಾತ್ ||

|| ಲಕ್ಷ್ಮೀನೃಸಿಂಹಾರ್ಪಿತೋವಿಜಯತೇಯಂಗ್ರಂಥಃ ||

*

ಶ್ರೀರಸ್ತು.

ಅಲಂಕಾರಲಕ್ಷಣಂ.

"ಅಲಂಕ್ರಿಯತೇ ಅನೇನ"— ಎಂದು ಅಲಂಕಾರಶಬ್ದದ ವ್ಯುತ್ಪತ್ತಿ, ಇಲ್ಲಿ "ಅಲಂ" ಎಂದರೆ ಭೂಷಣಾರ್ಥವು:— ಎಂದರೆ ಯಾವುದರಿಂದ ವಾಕ್ಯ ಭೂಷಿಸಲ್ಪಡುವುದೋ ಅದಕ್ಕೆ ಅಲಂಕಾರವೆಂದು ಹೆಸರು. ಅಲಂಕಾರವೆಂದರೆ ಕೇವಲ ಚಮತ್ಕಾರದ ಮಾತುಗಳಾಡುವುದೇ ಅಲ್ಲ ; ವಾಕ್ಯ ಸಹೃದಯ ಹೃದಯಾಹ್ಲಾದಕವಾಗುವುದಕ್ಕೆ ಎಷ್ಟು ಭೂಷಣವುಳ್ಳದಾಗಿರಬೇಕೋ ಹಾಗೆ ಮಾಡುವುದು ಅಲಂಕಾರವೆನಿಸುವುದು. ಇದಕ್ಕೆ ಅನೇಕ ನಿಯಮಗಳುಂಟು; ಆ ನಿಯಮಗಳೆಲ್ಲವೂ ಸೇರಿ ಒಂದು ದೊಡ್ಡ ಶಾಸ್ತ್ರವೇ ಆಗಿರುವುದು ; ಅದಕ್ಕೆ "ಅಲಂಕಾರಶಾಸ್ತ್ರ" ವೆಂದು ಹೆಸರು. ಅಲಂಕಾರಶಾಸ್ತ್ರದಲ್ಲಿ ಹತ್ತು ಪ್ರಕರಣಗಳಿರುವುವು

೧. ನಾಯಕಲಕ್ಷಣ—ಕಾವ್ಯದಲ್ಲಿಯ ಪಾತ್ರಗಳ ವಿಚಾರವಾದುದು. ನಾಯಕರೂ, ನಾಯಿಕೆಯರೂ ಅವರಿಗೆ ಸಹಾಯರಾಗುವರೂ. ಇವರ ಲಕ್ಷಣಗಳು ಯಾವ ಯಾವ ಕಾವ್ಯಗಳಲ್ಲಿ ಎಂತೆಂತಹ ನಾಯಿಕಾನಾಯಕರಿರಬೇಕು.—ಇತ್ಯಾದಿ ವಿಚಾರವಾದುದು.

೨. ಕಾವ್ಯಲಕ್ಷಣ:— ಕಾವ್ಯಗಳೆಷ್ಟು ವಿಧವಾಗುವುವು, ಯಾವ ಯಾವುದರಲ್ಲಿ ಯಾವ ಯಾವ ವಿಧದ ಶಯ್ಯಾದಿಗಳಿರಬೇಕು, ಇತ್ಯಾದಿ ವಿಚಾರವು.

೩. ನಾಟಕಪ್ರಕರಣ:— ನಾಟಕಗಳೆಷ್ಟು ವಿಧವಾಗುವುವು, ಅವುಗಳ ಲಕ್ಷಣಗಳೇನು, ಇತ್ಯಾದಿವಿಚಾರವು.

೪. ರಸಪ್ರಕರಣ:—ಇದು ಶೃಂಗಾರಾದಿ ನವರಸಗಳ ವಿಚಾರವಾದುದು.

೫ ದೋಷಪ್ರಕರಣ:— ಯಾವಯಾವುವು ಕಾವ್ಯದೋಷಗಳಾಗುವುವು, ಇತ್ಯಾದಿ ವಿಚಾರವು.

೬. ಗುಣಪ್ರಕರಣ:—ಯಾವಯಾವುವು ಕಾವ್ಯಗಳ ಗುಣವನ್ನು ಹೆಚ್ಚಿಸುವುವು ? ಇತ್ಯಾದಿ ವಿಚಾರವು.

೭. ಕವಿಸಮಯ:— ಕವಿಗಳು ಸಂಕೇತವಾಗಿ ವರ್ಣಿಸುವ ವಿಷಯಗಳು.

೮. ಶಬ್ದಾಲಂಕಾರ.— ಶಬ್ದಗಳಿಂದಲೇ ಕಾವ್ಯಕ್ಕೆ ಶೋಭಾವಿಶೇಷವನ್ನುಂಟುಮಾಡುವುದು.

೯. ಮಿಶ್ರಾಲಂಕಾರ:—ಶಬ್ದಗಳಿಂದಲೂ ಅರ್ಥದಿಂದಲೂ ಕಾವ್ಯಕ್ಕೆ ಶೋಭಾವಿಶೇಷವನ್ನುಂಟುಮಾಡುವುದು.

೧೦. ಅರ್ಥಾಲಂಕಾರ:— ಅರ್ಥಮಾತ್ರದಿಂದಲೇ ಕಾವ್ಯಕ್ಕೆ ಶೋಭೆಯನ್ನುಂಟುಮಾಡುವುದು.

ಈ ಹತ್ತು ಪ್ರಕರಣಗಳಲ್ಲಿ ಕೊನೆಯದಾದ ಅರ್ಥಾಲಂಕಾರವನ್ನೇ ಅಲಂಕಾರವೆಂದು ಸಾಮಾನ್ಯವಾಗಿ ಹೇಳಿಕೊಳ್ಳುವುದುಂಟು ; ಅದನ್ನೇ ಜನರು ತಿಳಿಯ ಯತ್ನಿಸುವುದು ಹೆಚ್ಚು. ಇತರವಿಷಯಗಳು ಕೇವಲ ಗಹನವಾಗಿರುವುದರಿಂದ ಅವೆಲ್ಲ ಸಾಹಿತ್ಯಾಂತದಲ್ಲಿ ತಿಳಿಯತಕ್ಕುವಾಗಿರುವುವು. ಪ್ರಕೃತದಲ್ಲಿ ಈ ಅರ್ಥಾಲಂಕಾರ ಪ್ರಕರಣದ ಪಡಿಯೊಂದು ಅಲಂಕಾರಕ್ಕೂ ಉದಾಹರಣೆಯಾಗುವಂತೆ ಒಂದೊಂದು ಪದ್ಯವನ್ನು ಬರೆದಿರುವುದು. ಆ ಆ ಅಲಂಕಾರದ ಲಕ್ಷಣವನ್ನೂ ಅದರ ಅಂತರ್ಭೇದವನ್ನೂ ತಿಳಿದುಕೊಳ್ಳುವುದೂ ಪ್ರಯೋಜನಕಾರಿಯಾದುದರಿಂದ ಅದನ್ನು ತಿಳಿಯಲಪೇಕ್ಷಿಸುವರಿಗಾಗಿ ಈ ಶೇಷಸಂಗ್ರಹವು ಸಂಗ್ರಹಿಸಲ್ಪಟ್ಟು ಬರೆಯಲ್ಪಟ್ಟಿರುವುದು. ಇದರಲ್ಲಿ ಪ್ರಯೋಗಿಸಿರುವ ಅನೇಕ ಶಬ್ದಗಳು ಪಾರಿಭಾಷಿಕ ಶಬ್ದಗಳೆಂದು ತಿಳಿದು ಅವುಗಳಿಗೆ ಸರಿಯಾದ ಅರ್ಥವನ್ನು ಮಾಡಿಕೊಳ್ಳುವುದಕ್ಕೆ ಯತ್ನಿಸಬೇಕು. ಹೆಚ್ಚು ವಿಷಯಗಳನ್ನು ತಿಳಿಯಲಪೇಕ್ಷಿಸುವರು ಇತರ ಗ್ರಂಥಗಳನ್ನು ನೋಡಬಹುದು.

೧. ಉಪಮೆ— ಇದು ಅಲಂಕಾರಗಳಲ್ಲೆಲ್ಲಾ ಪ್ರಧಾನವಾದುದು. ಉಪಮೆಯೆಂದರೆ ಹೋಲಿಕೆ. ಇದರಲ್ಲಿ ಎರಡು ವಸ್ತುಗಳಿರುವುವು; ಒಂದು ಹೋಲಿಸಲ್ಪಡುವುದು; ಒಂದು ಹೋಲಿಸುವುದು; ಹೋಲಿಸಲ್ಪಡುವುದಕ್ಕೆ ಉಪಮೇಯವೆಂದು ಹೆಸರು; ಹೋಲಿಸುವದಕ್ಕೆ ಉಪಮಾನವೆಂದು ಹೆಸರು; ಈ ಎರಡು ವಸ್ತುಗಳೂ ಭಿನ್ನವಾಗಿರಬೇಕು.

ಅವಕ್ಕೆ ಯಾವವಿಧದಲ್ಲಿ ಹೋಲಿಕೆಯೋ ಅದಕ್ಕೆ ಧರ್ಮವೆಂದು ಹೆಸರು. ಹೋಲಿಸುವಾಗ 'ಇದರ ಹಾಗೆ,' 'ಅದರಹಾಗೆ' ಎಂದು ಹೇಳಬೇಕಾಗುವುದರಿಂದ 'ಹಾಗೆ' ಎಂಬರ್ಥವುಳ್ಳ ಶಬ್ದವೊಂದು ಬೇಕಾಗುವುದು; ಇಂತಹ ಶಬ್ದಕ್ಕೆ ವಾಚಕವೆಂದು ಹೆಸರು. ಎಲ್ಲಿ ಎರಡು ವಸ್ತುಗಳಿಗೆ ಸಾದೃಶ್ಯವು ಚೆನ್ನಾಗಿಕಾಣಬರುವುದೋ ಅವಕ್ಕೆ ಉಪಮಾಲಂಕಾರವೆಂದು ಹೆಸರು. ಉಪಮಾನ, ಉಪಮೇಯ, ಧರ್ಮ, ವಾಚಕ- ಈ ನಾಲ್ಕೂ ಸಮಗ್ರವಾಗಿದ್ದರೆ ಅಲಂಕಾರಕ್ಕೆ ಪೂರ್ಣೋಪಮೆಯೆಂದು ಹೆಸರು; ಇವುಗಳಲ್ಲಿ ಯಾವುವಾದರೂ ಉಕ್ತವಾಗಿರದೆ ಅರ್ಥದಿಂದ ನಿರ್ಧರಿಸಲ್ಪಡಬೇಕಾದರೆ ಅದಕ್ಕೆ ಲುಪ್ತೋಪಮೆಯೆಂದು ಹೆಸರು. ಪೂರ್ಣೋಪಮೆ ಒಂದೇ ವಿಧವಾಗಿರುವುದು. (ಉದಾಹರಣೆ—ಪದ್ಯ ೩) ಲುಪ್ತೋಪಮೆಯಾದರೆ ಎಂಟು ವಿಧವಾಗುವುದು. (೧) ವಾಚಕವಿಲ್ಲದಿದ್ದರೆ ವಾಚಕಲುಪ್ತೋಪಮೆಯೆಂದು ಹೆಸರು. (ಉದಾ. ಪದ್ಯ ೪); (೨) ಧರ್ಮವಿಲ್ಲದಿದ್ದರೆ ಧರ್ಮಲುಪ್ತೋಪಮೆಯೆನಿಸುವುದು (ಉದಾ.-ಪದ್ಯ ೫); (೩) ಧರ್ಮವೂ ವಾಚಕವೂ ಇಲ್ಲದಿದ್ದರೆ ಧರ್ಮವಾಚಕಲುಪ್ತೋಪಮೆಯೆಂದು ಹೆಸರು. ಉದಾ. ಪದ್ಯ ೬); (೪) ವಾಚಕವೂ ಉಪಮೇಯವೂ ಇಲ್ಲದಿದ್ದರೆ ವಾಚಕೋಪಮೇಯ ಲುಪ್ತೋಪಮೆ ಯೆಂದು ಹೆಸರು (ಉದಾ.- ಪದ್ಯ ೭); (೫) ಉಪಮಾನವೇ ಇಲ್ಲದಿದ್ದರೆ ಉಪಮಾನಲುಪ್ತೋಪಮೆಯೆಂದು ಹೆಸರು (ಉದಾ. ಪದ್ಯ ೮); (೬) ವಾಚಕವೂ ಉಪಮಾನವೂ ಇಲ್ಲದಿದ್ದರೆ ವಾಚಕೋಪಮಾನಲುಪ್ತೋಪಮೆಯೆಂದು ಹೆಸರು (ಉದಾ-ಪದ್ಯ ೯); (೭) ಧರ್ಮವೂ ಉಪಮಾನವೂ ಇಲ್ಲದಿದ್ದರೆ ಧರ್ಮೋಪಮಾನ ಲುಪ್ತೋಪಮೆಯೆಂದು ಹೆಸರು (ಉದಾ.-ಪದ್ಯ ೧೦); (೮) ಧರ್ಮವೂ ಉಪಮಾನವೂ ವಾಚಕವೂ ಇಲ್ಲದಿದ್ದರೆ ಧರ್ಮೋಪಮಾನ ವಾಚಕಲುಪ್ತೋಪಮೆಯೆಂದು ಹೆಸರು. (ಉದಾ.-ಪದ್ಯ ೧೧) ಇತರ ಗ್ರಂಥಗಳಲ್ಲಿ ಉಪಮೆಯ ಇತರ ಭೇದಗಳು ಉಕ್ತವಾಗಿರುವುವು; ನಾವು ಕುವಲಯಾನಂದ ಮಾರ್ಗವನ್ನು ಅನುಸರಿಸುವುದರಿಂದ ಅಲ್ಲಿ ಎಷ್ಟು ಉಕ್ತವಾಗಿರುವುದೋ ಅಷ್ಟಕ್ಕೇ ಲಕ್ಷಣಗಳನ್ನು ಕಲ್ಪಿಸಿರುವೆವು.

೨. ಅನನ್ವಯ.—ಎಲ್ಲಿ ಉಪಮಾನವೂ ಉಪಮೇಯವೂ ಒಂದೇ ವಸ್ತುವಾಗಿರುವಂತೆ ವರ್ಣಿಸಲ್ಪಟ್ಟಿರುವುದೋ ಅದಕ್ಕೆ ಅನನ್ವಯಾಲಂಕಾರ

ವೆಂದು ಹೆಸರು (ಉದಾ.-ಪದ್ಯ ೧೨) (ವರ್ಣಿಸಲ್ಪಡುವ ವಸ್ತುವಿಗೆ ಸಮಾನವಾದುದು ಬೇರೊಂದಿಲ್ಲವೆಂದು ಇದರಿಂದ ಧ್ವನಿತವಾಗುವುದು.)

೩. ಉಪಮೇಯೋಪಮೆ.—ಎರಡು ಭಿನ್ನವಸ್ತುಗಳಿದ್ದು ಒಂದ ಕ್ಕೊಂದನ್ನು ಪರ್ಯಾಯವಾಗಿ ಹೋಲಿಸಿದ್ದರೆ ಉಪಮೇಯೋಪಮಾಲಂಕಾರ ವೆನಿಸುವುದು. (ಉದಾ—ಪದ್ಯ.೧೩) (ಇದರಿಂದ ಆ ಎರಡು ವಸ್ತುಗಳಿಗೆ ಸದೃಶವಾದ ತೃತೀಯವಸ್ತು ಲಭಿಸಲಾರದೆಂದು ಧ್ವನಿತವಾಗುವದು.

೪. ಪ್ರತೀಪ— ಉಪಮಾನವನ್ನೇ ಉಪಮೇಯವಾಗಿ ಮಾಡಿ ವರ್ಣಿಸಿದ್ದರೆ ಪ್ರತೀಪಾಲಂಕಾರವೆನಿಸುವುದು. (ಯಾವುದು ಉಪಮಾನವಾಗಿಯೂ ಯಾವುದು ಉಪಮೇಯವಾಗಿಯೂ ಪ್ರಸಿದ್ಧವಾಗಿರುವುವೋ ಅವುಗಳನ್ನು ಹೆಚ್ಚು ಕಡಿಮೆ ಮಾಡುವುದರಿಂದ ಪ್ರತೀಪವೆಂಬ ಹೆಸರು ಬರುವುದು. (ಉದಾ.-ಪದ್ಯ ೧೪). ಇದರಲ್ಲಿ ಇನ್ನೂ ಎರಡು ಭೇದಗಳಿರುವುವು. (೧) ಮತ್ತೊಂದು ಉಪಮೇಯವನ್ನು ತೋರಿ ಪ್ರಕೃತವಾದ ಉಪಮೇಯವನ್ನು ನಿರಾಕರಿಸುವುದು (ಉದಾ. ಪ— ೧೫) (೨) ವರ್ಣ್ಯವಾದ ಉಪಮೇಯವನ್ನು ತೋರಿ ಮತ್ತೊಂದು ಉಪಮೇಯವನ್ನು ನಿರಾಕರಿಸುವುದು. (ಉದಾ-ಪದ್ಯ ೧೬)

೫. ರೂಪಕ.-ಉಪಮಾನೋಪಮೇಯಗಳಿಗೆ ಎಲ್ಲಿ ಅಭೇದವಾಗಲಿ ತಾದ್ರೂಪ್ಯವಾಗಲೀ ವರ್ಣಿತವಾಗಿರುವುದೋ ಅದು ರೂಪಕಾಲಂಕಾರ ವೆನಿಸುವುದು. ಅಭೇದದಲ್ಲಿಯೂ ತಾದ್ರೂಪ್ಯದಲ್ಲಿಯೂ ಆಧಿಕ್ಯ, ನ್ಯೂನತ್ವ ಅನುಭಯೋಕ್ತಿ ಎಂದು ಮೂರು ಮೂರು ಭೇದಗಳಾಗುವುವು. ಆದುದ ರಿಂದ ರೂಪಕದಲ್ಲಿ ಒಟ್ಟು ಆರು ಭೇದಗಳಾಗುವುವು.

(೧) ಅನುಭಯಾಭೇದರೂಪಕ (ಉದಾ-ಪದ್ಯ ೧೭) ;
(೨) ನ್ಯೂನಾಭೇದರೂಪಕ (ಉದಾ-ಪದ್ಯ ೧೮) ;
(೩) ಅಧಿಕಾಭೇದರೂಪಕ (ಉದಾ.-ಪದ್ಯ ೧೯) ;
(೪) ಅನುಭಯತಾದ್ರೂಪ್ಯರೂಪಕ (ಉದಾ.-ಪದ್ಯ ೨೦) ;
(೫) ನ್ಯೂನತಾದ್ರೂಪ್ಯರೂಪಕ (ಉದಾ-ಪದ್ಯ ೨೧) ;
(೬) ಅಧಿಕತಾದ್ರೂಪ್ಯರೂಪಕ (ಉದಾ.-ಪದ್ಯ ೨೨) ;

೬. ಪರಿಣಾಮ.— ಎಲ್ಲಿ ಆರೋಪ್ಯಮಾಣವಾದ ವಿಷಯಿಯೇ ವಿಷ

ಯಾತ್ಮಕವಾಗಿದ್ದು ನಿಬಧ್ಯಮಾನಕಾರ್ಯಕ್ಕೆ ಉಪಯೋಗಿಯಾಗಿರುವುದೋ ಅಲ್ಲಿ ಪರಿಣಾಮಾಲಂಕಾರವೆನಿಸುವುದು. (ಉದಾ.-ಪದ್ಯ ೨೩)

೭. ಉಲ್ಲೇಖ. (೧) ಎಲ್ಲಿ ನಾನಾವಿಧ ಧರ್ಮಗಳನ್ನು ಒಳಕೊಂಡ ಒಂದೇ ವಸ್ತು ಆ ಆ ಧರ್ಮಗಳ ಅಂಗೀಕಾರದಿಂದ ಅನೇಕ ಗ್ರಹೀತೃಗಳಿಂದ ಅನೇಕವಿಧವಾಗಿ ಉಲ್ಲೇಖಿಸಲ್ಪಡುವುದೋ ಅಲ್ಲಿ ಉಲ್ಲೇಖಾಲಂಕಾರವಾಗುವುದು (ಉದಾ.-ಪದ್ಯ ೨೪.) (೨) ಗ್ರಹೀತೃಭೇದವಿಲ್ಲದಿದ್ದರೂ ಒಂದೇ ವಸ್ತುವೇ ವಿಷಯಭೇದದಿಂದ ಬಹುಪ್ರಕಾರವಾಗಿ ಉಲ್ಲೇಖಿಸಲ್ಪಡುವುದೋ ಅದೂ ಉಲ್ಲೇಖಾಲಂಕಾರವೆನಿಸುವುದು. (ಉದಾ.ಪ.೨೫)

೮. ಸ್ಮೃತಿಮತ್:—ಒಂದು ವಸ್ತುವನ್ನು ನೋಡುವುದರಿಂದ ತತ್ಸದೃಶವಾದ ಮತ್ತೊಂದುವಸ್ತು ಸ್ಮರಣೆಗೆ ಬರುವಂತೆ ವರ್ಣಿತವಾಗಿದ್ದರೆ ಸ್ಮೃತಿಮದಲಂಕಾರವೆನಿಸುವುದು (ಉ.-ಪದ್ಯ ೨೬)

೯. ಭ್ರಾಂತಿಮತ್:— ಮೇಲೆಹೇಳಿದ ಸ್ಮರಣೆಯ ಸ್ಥಳದಲ್ಲಿ ಭ್ರಾಂತಿಯುಂಟಾದಂತೆ ವರ್ಣಿಸಲ್ಪಟ್ಟದ್ದರೆ ಭ್ರಾಂತಿಮದಲಂಕಾರವೆನಿಸುವುದು (ಉದಾ.-ಪದ್ಯ ೨೭)

೧೦. ಸಂದೇಹ:—ಹಾಗೆಯೇ ಸಂದೇಹವು ವರ್ಣಿತವಾಗಿದ್ದರೆ ಸಂದೇಹಾಲಂಕಾರವೆನಿಸುವುದು (ಉದಾ-ಪದ್ಯ ೨೮)

೧೧. ಅಪಹ್ನುತಿ:— ಅಪಹ್ನುತಿಯೆಂದರೆ ಮರೆಮಾಡುವುದೆಂದ್ಯ ಸಾಮಾನ್ಯಾರ್ಥವು ಈ ಅಲಂಕಾರವು ಒಂಭತ್ತು ವಿಧವಾಗುವುದು.

(೧) ಶುದ್ಧಾಪಹ್ನುತಿ— ಒಂದುವಸ್ತು ವರ್ಣನೀಯವಾಗಿರಲು ತತ್ಸದೃಶ ಧರ್ಮಾರೋಪ ಪ್ರಯೋಜನಕ್ಕಾಗಿ ಆ ವರ್ಣನೀಯ ವಸ್ತುವಿನ ಧರ್ಮವನ್ನು ಮರೆಮಾಡುವುದಾಗಲೀ ಕವಿಬುದ್ಧಿವಿಕಾಸದಿಂದ ಉತ್ಪ್ರೇಕ್ಷಿತವಾದ ಧರ್ಮಾಂತರವನ್ನಾಗಲೀ ಮರೆಮಾಡುವುದು ಶುದ್ಧಾಪಹ್ನುತಿಯೆನಿಸುವುದು.(ಉದಾ.-ಪದ್ಯ ೨೯)

(೨) ಹೇತ್ವಪಹ್ನುತಿ:— ಅದೇ ಯುಕ್ತಿಪೂರ್ವಕವಾದರೆ ಹೇತ್ವಪಹ್ನುತಿಯೆನಿಸುವುದು. (ಉದಾ.-ಪದ್ಯ ೩೦)

(೩) ಪರ್ಯಸ್ತಾಪಹ್ನುತಿ:-- ಎಲ್ಲಿ ಒಂದುವಸ್ತುವಿನ ಧರ್ಮವನ್ನು ನಿಹ್ನವ (ಮರೆ) ಮಾಡಿ ಬೇರೊಂದು ವರ್ಣನೀಯವಾದ ವಸ್ತುವಿನಲ್ಲಿ

ಅಡತ ಧರ್ಮವನ್ನು ಆರೋಪಿಸಿದ್ದರೆ ಪರ್ಯಸ್ತಾಪಹ್ನುತಿಯೆನಿಸುವುದು (ಉದಾ.-ಪದ್ಯ ೩೧)

(೪) + ೫.- ಭ್ರಾಂತಾಪಹ್ನುತಿ: — ಇನ್ನೊಂದು ವಸ್ತುವಿನ ಶಂಕೆಯಿಂದ ಭ್ರಾಂತಿಗೆ ಕಾರಣವಿರಲು ಅನ್ಯರ ಶಂಕೆಗೆ ಬಾಧಕವಾದ ವೈಧರ್ಮ್ಯವನ್ನು ಹೇಳಿ ಆ ಭ್ರಾಂತಿಯನ್ನು ನಿವಾರಣವಮಾಡಿದರೆ ಭ್ರಾಂತಾಪಹ್ನುತಿಯೆನಿಸುವುದು.

(೪) ಭ್ರಾಂತಿ ಸ್ವಾಭಾವಿಕವಾದುದಾದರೆ ಸಂಭವದ್ಭ್ರಾಂತಾಪಹ್ನುತ್ಯಲಂಕಾರವೆನಿಸುವುದು (ಉದಾ-ಪದ್ಯ ೩೨)

(೫) ಭ್ರಾಂತಿ ಕಲ್ಪಿತವಾದುದಾಗಿ ತೋರಬಂದರೆ ಅದು ಕಲ್ಪಿತಭ್ರಾಂತಾಪಹ್ನುತ್ಯಲಂಕಾರವೆನಿಸುವುದು (ಉದಾ.-ಪದ್ಯ ೩೩)

(೬ + ೭ + ೮) ಛೇಕಾಪಹ್ನುತಿ. ಒಬ್ಬನು ಮತ್ತೊಬ್ಬನಿಗೆ ತನ್ನ ರಹಸ್ಯಾದಿಗಳನ್ನು ಹೇಳುತ್ತಿರಲು ಅದನ್ನು ಇನ್ನು ಯಾರಾದರೂ ಕೇಳಿ, ತನ್ನಮಾತಿನ ಯಥಾರ್ಥಾಭಿಪ್ರಾಯವನ್ನು ತಿಳಿದುಕೊಂಡು ಪ್ರಶ್ನೆಮಾಡಿದರೆ ಲಜ್ಜಾಭಂಗಾದಿಗಳಿಂದ ತನ್ನಮಾತಿಗೆ ತಾತ್ಪರ್ಯಾಂತರವನ್ನು ಕಲ್ಪಿಸಿ ತಥ್ಯನಿಹ್ನವಮಾಡಿದಂತೆ ವರ್ಣಿತವಾಗಿದ್ದರೆ ಛೇಕಾಪಹ್ನುತಿಯೆಂದು ಹೆಸರು. ಛೇಕವೆಂದರೆ ವಿದಗ್ಧರೆಂದರ್ಥವು; ಹಾಗೆ ತಾತ್ಪರ್ಯಾಂತರಕಲ್ಪನೆಮಾಡಿ ಯಥಾರ್ಥನಿಹ್ನವಮಾಡುವುದು ಛೇಕ (ವಿದಗ್ಧ)ರಿಗೆ ಸಾಧ್ಯವಾದುದರಿಂದ ಛೇಕಾಪಹ್ನುತಿಶಬ್ದವು ಅನ್ವರ್ಥವಾದುದು. ಇದರಲ್ಲಿ ಮೂರು ಭೇದಗಳಿರುವುವು:—

(೬) ಅರ್ಥಯೋಜನಾಛೇಕಾಪಹ್ನುತಿ (ಉದಾ.-ಪದ್ಯ ೩೪);

(೭) ಶಬ್ದಯೋಜನಾಛೇಕಾಪಹ್ನುತೀ (ಉದಾ.-ಪದ್ಯ ೩೫);

(೮) ಅವಸ್ಥಾಭೇದಯೋಜನಾಛೇಕಾಪಹ್ನುತಿ(ಉದಾ-ಪದ್ಯ ೩೬)

ಈ ಭೇದಗಳ ಅರ್ಥವು ಸ್ವತಸ್ಸಿದ್ಧವಾಗಿರುವುದು.

(೯) ಕೈತವಾಪಹ್ನುತಿ:-ವ್ಯಾಜಾದಿಪದಪ್ರಯೋಗಮಾಡಿ ಯಥಾರ್ಥವನ್ನು ನಿಹ್ನವಮಾಡಿದರೆ ಕೈತವಾಪಹ್ನುತಿಯೆನಿಸುವುದು(ಉದಾ.-ಪದ್ಯ೩೭)

೧೨. ಉತ್ಪ್ರೇಕ್ಷೆ— ಅಪ್ರಕೃತವಾದ ಧರ್ಮಸಂಬಂಧವನ್ನು ನಿಮಿತ್ತಮಾಡಿಕೊಂಡು ಪ್ರಕೃತವಸ್ತುವಿನಲ್ಲಿ ಆ ಧರ್ಮವನ್ನು ಸಂಭಾವಿಸುವುದು

ಉತ್ಪ್ರೇಕ್ಷಾಲಂಕಾರವೆನಿಸುವುದು. ಸಂಭಾವನೆಯೆಂದರೆ ಉತ್ಕಟಕೋಟಿಕವಾದ ಸಂಶಯವು. (ಅದುದರಿಂದ "ಹೀಗಿರಬಹುದೋ" 'ನಾನು ಹೀಗೆ ತಿಳವೆನು' 'ನಿಶ್ಚಯವು'ದಲ್, ಇತ್ಯಾದಿ'—ಇತ್ಯಾದಿಗಳಲ್ಲಿ ಯಾವುದಾದರೂ ಒಂದು ಉತ್ಪ್ರೇಕ್ಷೆಯಲ್ಲಿರಬೇಕು; ಇಲ್ಲದಿದ್ದರೆ ಗಮ್ಯೋತ್ಪ್ರೇಕ್ಷೆಯೆನಿಸುವುದು) ಆ ಸಂಭಾವನೆವಸ್ತು, ಹೇತು, ಫಲಾತ್ಮಕವಾಗಿ ಗೋಚರವಾಗುವುದು. ವಸ್ತೂತ್ಪ್ರೇಕ್ಷೆಯಲ್ಲಿ ಉಕ್ತವಿಷಯ, ಅನುಕ್ತ ವಿಷಯ, ಎಂಬ ಭೇದಗಳೂ ಹೇತೂತ್ಪ್ರೇಕ್ಷೆಯಲ್ಲಿಯೂ ಫಲೋತ್ಪ್ರೇಕ್ಷೆಯಲ್ಲಿಯೂ ಸಿದ್ಧ ವಿಷಯ-ಅಸಿದ್ಧವಿಷಯ, ಎಂಬ ಎರಡೆರಡು ಭೇದಗಳೂ ಇರುವುವು;

(೧) ಉಕ್ತವಿಷಯ ಸ್ವರೂಪೋತ್ಪ್ರೇಕ್ಷೆ (ಉದಾ.-ಪದ್ಯ ೩೮);
(೨) ಅನುಕ್ತವಿಷಯ ಸ್ವರೂಪೋತ್ಪ್ರೇಕ್ಷೆ (ಉದಾ.-ಪದ್ಯ೩೯);
(೩) ಸಿದ್ಧವಿಷಯ ಹೇತೂತ್ಪ್ರೇಕ್ಷೆ (ಉದಾ.-ಪದ್ಯ ೪೦);
(೪) ಅಸಿದ್ಧವಿಷಯ ಹೇತೂತ್ಪ್ರೇಕ್ಷೆ (ಉದಾ.-ಪದ್ಯ ೪೧)
(೫) ಸಿದ್ಧವಿಷಯಫಲೋತ್ಪ್ರೇಕ್ಷೆ (ಉದಾ.-ಪದ್ಯ ೪೨)
(೬) ಅಸಿದ್ಧವಿಷಯಫಲೋತ್ಪ್ರೇಕ್ಷೆ (ಉದಾ.-ಪದ್ಯ ೪೩)
(೭) ಗಮ್ಯೋತ್ಪ್ರೇಕ್ಷೆ:—ಉತ್ಪ್ರೇಕ್ಷಾವ್ಯಂಜಕಶಬ್ದಗಳಿಲ್ಲದಿರುವುದು (ಉದಾ.-ಪದ್ಯ ೪೪)

(೧೩) ಅತಿಶಯೋಕ್ತಿ:— ವಿಷಯನಿಗರಣಪೂರ್ವಕವಾಗಿ ವಿಷಯವನ್ನು ವಿಷಯಿರೂಪವುಳ್ಳದಾನಂತೆ ಅಧ್ಯವಸಾನಮಾಡಿದರೆ ರೂಪಕಾತಿಶಯೋಕ್ತಿಯೆನಿಸುವುದು. ವಿಷಯನಿಗರಣವೆಂದರೆ ವಿಷಯವನ್ನು ಸ್ವಶಬ್ದದಿಂದ ಉಲ್ಲೇಖನಮಾಡದಿದ್ದರೂ ವಿಷಯಿವಾಚಕವಾದ ಶಬ್ದದಿಂದಲೇ ಗ್ರಹಣಮಾಡುವುದು. ಈ ರೂಪಕಾತಿಶಯೋಕ್ತಿಯಲ್ಲಿ ರೂಪಕದಲ್ಲಿರುವ ಆರು ಚಮತ್ಕಾರಗಳೂ ಬರಬಹುದು.

(೧) ಅನುಭಯಾಭೇದರೂಪಕಾತಿಶಯೋಕ್ತಿ (ಉದಾ.-ಪದ್ಯ ೪೫);
(೨) ನ್ಯೂನಾಭೇದರೂಪಕಾತಿಶಯೋಕ್ತಿ (ಉದಾ.-ಪದ್ಯ ೪೬)
(೩) ಅಧಿಕಾಭೇದ ರೂಪಕಾತಿಶಯೋಕ್ತಿ (ಉದಾ.-ಪದ್ಯ ೪೭)
(೪) ಅಧಿಕತಾದ್ರೂಪ್ಯಾತಿಶಯೋಕ್ತಿ (ಉದಾ.-ಪದ್ಯ ೪೮)
(೫) ಅನುಭಯತಾದ್ರೂಪ್ಯಾತಿಶಯೋಕ್ತಿ (ಉದಾ.-ಪದ್ಯ ೪೯)

(೬) ನ್ಯೂನತಾದ್ಯೂರ್ವ್ಯಾತಿಶಯೋಕ್ತಿ (ಉದಾ - ಪದ್ಯ ೫೦)

(೭) ಸಾಪಹ್ನವರೂಪಕಾತಿಶಯೋಕ್ತಿ,— ರೂಪಕಾತಿಶಯೋಕ್ತಿಯೇ ಅಪಹ್ನುತಿಗರ್ಭವಾಗಿದ್ದರೆ ಸಾಪಹ್ನವರೂಪಕಾತಿಶಯೋಕ್ತಿಯೆನಿಸುವುದು (ಉದಾ.-ಪದ್ಯ ೫೧)

ಇದರಲ್ಲಿ ಅಪಹ್ನುತಿಯಲ್ಲಿರುವ ಚಮತ್ಕಾರಗಳೆಲ್ಲವೂ ಬರಬಹುದು. ಅವು ಇಲ್ಲಲ್ಲಿ ಕಾಣಬರಬಹುದಾದುದರಿಂದ ಪ್ರತ್ಯೇಕವಾಗಿ ಲಕ್ಷ್ಯಗಳನ್ನು ಕಲ್ಪಿಸಿಲ್ಲ.

(೮) ಭೇದಕಾತಿಶಯೋಕ್ತಿ-ಭೇದವಿಲ್ಲದಿದ್ದರೂ ಭೇದತೋರುವಂತೆ ವರ್ಣನೆಮಾಡಿದ್ದರೆ ಭೇದಕಾತಿಶಯೋಕ್ತಿಯೆನಿಸುವುದು (ಉದಾ-ಪದ್ಯ ೫೨):

(೯) ಸಂಬಂಧಾತಿಶಯೋಕ್ತಿ- ಸಂಬಂಧವಿಲ್ಲದಿದ್ದರೂ ಸಂಬಂಧವಿರುವಂತೆ ವರ್ಣಿಸಿದ್ದರೆ ಸಂಬಂಧಾತಿಶಯೋಕ್ತಿಯೆನಿಸುವುದು(ಉ-ಪ. ೫೩);

(೧೦) ಅಸಂಬಂಧಾತಿಶಯೋಕ್ತಿ- ಯೋಗ (ಸಂಬಂಧ)ವಿದ್ದರೂ ಯೋಗವಿರದಂತೆ ವರ್ಣಿತವಾಗಿದ್ದರೆ ಅಸಂಬಂಧಾತಿಶಯೋಕ್ತಿಯೆನಿಸುವುದು (ಉದಾ- ಪದ್ಯ ೫೪)

(೧೧) ಅಕ್ರಮಾತಿಶಯೋಕ್ತಿ.-ಕಾರ್ಯಕಾರಣಗಳು ಏಕಕಾಲದಲ್ಲಿ ಸಂಭವಿಸಿದಂತೆ ವರ್ಣಿತವಾಗಿದ್ದರೆ ಅಕ್ರಮಾತಿಶಯೋಕ್ತಿಯೆನಿಸುವುದು. (ಉದಾ - ಪದ್ಯ ೫೫)

(೧೨) ಚಪಲಾತಿಶಯೋಕ್ತಿ.—ಹೇತು ಪ್ರಸಕ್ತಿಮಾತ್ರದಿಂದಲೇ ಹೇತುವಿನ ಅಭಾವದಲ್ಲಿಯೂ ಕೂಡ, ಕಾರ್ಯವು ಸಿದ್ಧವಾದಂತೆ ವರ್ಣಿತವಾಗಿದ್ದರೆ! ಚಪಲಾತಿಶಯೋಕ್ತಿಯೆನಿಸುವುದ ;(ಇಲ್ಲಿ ಚಪಲ ಶಬ್ದಕ್ಕೆ ಸತ್ವರಾರ ; ಎಂದರೆ ತಡವಿಲ್ಲದೆ ಎಂದು) ಉದಾ. ಪದ್ಯ ೫೬)

(೧೩) ಅತ್ಯಂತಾತಿಶಯೋಕ್ತಿ:—ಕಾರ್ಯಕಾರಣಗಳ ಪೌರ್ವಾಪರ್ಯವನ್ನು ವ್ಯತಿಕ್ರಮದಿಂದ (ಎಂದರೆ, ಯಾವುದು ಮೊದಲು ಬರಬೇಕೋ ಅದು ಆಮೇಲೆ ಬಂದಂತೆಯೂ ಯಾವುದು ಆಮೇಲೆ ಬರಬೇಕೋ ಅದು ಮೊದಲು ಬಂದಂತೆಯೂ) ವರ್ಣಿಸಿದ್ದರೆ ಅತ್ಯಂತಾತಿಶಯೋಕ್ತಿಯೆನಿಸುವುದು. ಉದಾ. ಪದ್ಯ ೫೭)

(೧೪) ತುಲ್ಯಯೋಗಿತೆ:—ಪ್ರಸ್ತುತವಾಗಲಿ, ಅಪ್ರಸ್ತುತವಾಗಲೀ

ಆಗಿರುವ ವಸ್ತುಗಳ ಗುಣಕ್ರಿಯಾರೂಪವಾದ ಏಕಧರ್ಮಾನ್ವಯವು ವರ್ಣಿತವಾಗಿದ್ದರೆ ತುಲ್ಯಯೋಗಿತಾಲಂಕಾರವೆನಿಸುವುದು.

(೧) ಪ್ರಸ್ತುತಾಪ್ರಸ್ತುತೈಕಕ್ರಿಯಾನ್ವಯ (ಉದಾ-ಪದ್ಯ ೫೮);

(೨) ಅಪ್ರಸ್ತುತೈಕಗುಣಾನ್ವಯ (ಉದಾ- ಪದ್ಯ ೫೯)

(೩) ಹಿತಾಹಿತವಿಷಯಕವಾದ ವರ್ತನವು ತುಲ್ಯ (ಏಕರೂಪ) ವಾಗಿರುವಂತೆ ವರ್ಣಿತವಾಗಿದ್ದರೆ ಅದೂ ತುಲ್ಯಯೋಗಿತೆಯೆನಿಸುವುದು— (ಉದಾ:— ಪದ್ಯ ೬೦).

(೪) ವರ್ಣನೀಯವಸ್ತುವನ್ನು ಗುಣೋತ್ಕೃಷ್ಟವಸ್ತುಗಳಿಗೆ ಸಮ ಮಾಡಿ ವರ್ಣಿಸುವುದೂ ತುಲ್ಯಯೋಗಿತೆಯೆನಿಸುವುದು. (ಇದರಿಂದ ವರ್ಣನೀಯವಸ್ತುವೂ ಆ ಗುಣೋತ್ಕೃಷ್ಟವಸ್ತುಗಳಂತಿರುವುದು-ಎಂಬ ಅರ್ಥವು ಸೂಚಿತವಾಗುವುದು. (ಉದಾ—ಪ. ೬೧).

೧೫ ದೀಪಕ—(೧) ಸಮುದಿತಗಳಾದ ವರ್ಣ್ಯಾವರ್ಣ್ಯಗಳಿಗೆ ಏಕ ಧರ್ಮಾನ್ವಯವಿದ್ದರೆ ದೀಪಕಾಲಂಕಾರವೆನಿಸುವುದು.(ಉದಾ:-ಪ. ೬೨) (೨),(೩),(೪) ಪದವಾಗಲೀ ಅರ್ಥವಾಗಲೀ ಅವೆರಡೂ ಆಗಲಿ ಆವೃತ್ತಿಯಾಗಿದ್ದರೆ ಆವೃತ್ತಿ ದೀಪಕವೆನಿಸುವುದು.

(೨) ಪದಾವೃತ್ತಿದೀಪಕ (ಉದಾ-ಪ. ೬೩)

(೩) ಅರ್ಥಾವೃತ್ತಿದೀಪಕ (ಉದಾ:_ಪ. ೬೪)

(೪) ಪದಾರ್ಥಾವೃತ್ತಿದೀಪಕ (ಉದಾ:-ಪ. ೬೫)

೧೬. ಪ್ರತಿವಸ್ತೂಪಮೆ—(೧) ಉಪಮಾನೋಪಮೇಯ ವಿಷಯಕವಾದ ಎರಡು ವಾಕ್ಯಗಳಿದ್ದು ಸಮಾನವಾದ ಧರ್ಮವು ಬೇರೆ ಬೇರೆಯಾಗಿ ಎಲ್ಲಿ ನಿರ್ದೇಶಿಸಲ್ಪಡುವುದೋ ಅದಕ್ಕೆ ಪ್ರತಿವಸ್ತೂಪಮಾಲಂಕಾರವೆಂದು ಹೆಸರು. (ಉದಾ.-ಪ. ೬೬)

(೨) ವೈಧರ್ಮ್ಯದಿಂದಲೂ ಪ್ರತಿವಸ್ತೂಪಮೆಯಾಗುವುದುಂಟು (ಉದಾ.-ಪ. ೬೭)

೧೭. ದೃಷ್ಟಾಂತ.— (೧) ಉಪಮಾನೋಪಮೇಯವಾಕ್ಯಗಳು ಎರಡೂ ಇದ್ದು ಅವುಗಳಲ್ಲಿಯ ಧರ್ಮವು ಭಿನ್ನವಾಗಿಯೇ ಇದ್ದರೂ

ಬಿಂಬ ಪ್ರತಿ ಬಿಂಬಭಾವದಿಂದ ನಿರ್ದಿಷ್ಟವಾಗಿದ್ದರೆ ದೃಷ್ಟಾಂತಾಲಂಕಾರವೆನಿಸುವುದು. (ಉದಾ-ಪ. ೬೮)

(೨) ವೈಧರ್ಮ್ಯದಿಂದಲೂ,ದೃಷ್ಟಾಂತಾಲಂಕಾರವೆನಿಸುವುದುಂಟು (ಉದಾ-ಪ. ೬೯)

೧೮. ನಿದರ್ಶನೆ—(೧) ಬಿಂಬ ಪ್ರತಿಬಿಂಬ ಭಾವದಿಂದ ನಿರ್ದಿಷ್ಟವಾದ ಧರ್ಮಗಳುಳ್ಳ ಎರಡು ಧರ್ಮಗಳಿಗೆ ಐಕ್ಯಾರೋಪವು ವರ್ಣಿತವಾಗಿದ್ದರೆ ನಿದರ್ಶನಾಲಂಕಾರವಾಗುವುದು (ಉದಾ-ಪ. ೭೦) (ಎಂದರೆ ಉಪಮಾನೋಪಮೇಯ ವಾಕ್ಯಾರ್ಥಗಳಿಗೆ ಐಕ್ಯಾರೋಪವಾಗುವುದು)

(೨+೩) ಎಲ್ಲಿ ಉಪಮೇಯದುದಾವಾಗಲೀ ಉಪಮಾನದುದಾಗಲೀಧರ್ಮಾರೋಪವು ತದನ್ಯತರ ಧರ್ಮಿಕವಾಗುವುದೋ ಅಲ್ಲಿ ಪದಾರ್ಥಾವೃತ್ತಿ ನಿದರ್ಶನಾಲಂಕಾರವೆಂದು ಹೆಸರು. ಇದರಲ್ಲಿ ಅವಾಂತರ ಭೇಧಗಳಿರುವುವು.

(೨) ಉಪಮೇಯದಲ್ಲಿ ಉಪಮಾನಧರ್ಮಾರೋಪ(ಉದಾ-ಪ.೭೧)

(೩) ಉಪಮಾನದಲ್ಲಿ ಉಪಮೇಯಧರ್ಮಾರೋಪ (ಉದಾ-ಪ. ೭೨)

(೪+೫) ಒಂದಾನೊಂದು ಕ್ರಿಯೆಯಿಂದ ಕೂಡಿದ ಒಂದು ವಸ್ತು ಸ್ವಕ್ರಿಯೆಯಿಂದ ಅಸತ್ (ಇಲ್ಲದುದು) ಸತ್ (ಇರುವುದು) ಅರ್ಥಗಳು ಬೋಧ್ಯಬೋಧಕಗಳನ್ನು ಸೂಚಿಸುವಂತೆ ವರ್ಣಿತವಾಗಿದ್ದರೆ ಅದೂ ನಿದರ್ಶನಾಲಂಕಾರವು.

(೪) ಅಸದರ್ಥಬೋಧನಾನಿದರ್ಶನಾಲಂಕಾರ (ಉದಾ-ಪ. ೭೩)

(೫) ಸದರ್ಥಬೋಧನಾನಿದರ್ಶನಾಲಂಕಾರ (ಉದಾ-ಪ. ೭೪)

೧೯. ವ್ಯತಿರೇಕ—ಉಪಮಾನೋಪಮೇಯಗಳಿಗೆ ಎಲ್ಲಿ ಭೇದವು ವರ್ಣಿಸಲ್ಪಡುವುದೋ ಅದಕ್ಕೆ ವ್ಯತಿರೇಕಾಲಂಕಾರವೆಂದು ಹೆಸರು ಇದರಲ್ಲಿ ಮೂರು ಭೇದಗಳಿರುವುವು.

(೧) ಉಪಮೇಯಾಧಿಕ್ಯ (ಉದಾ-ಪ. ೭೫)

(೨) ಉಪಮಾನಾಧಿಕ್ಯ (ಉದಾ-ಪ. ೭೬)

(೩) ಅನುಭಯಾಧಿಕ್ಯ (ಉದಾ-ಪ. ೭೭)

ಈ ಭೇದಗಳಅರ್ಥಗಳು ಅವುಗಳಹೆಸರಿಂದಲೇ ತಿಳಿಯಬರುವುವು.

೨೦. ಸಹೋಕ್ತಿ.—ಎಲ್ಲಿ ಸಹಭಾವವು ಸಹೃದಯ ಹೃದಯಾಹ್ಲಾದಕವಾಗುವಂತೆ ವರ್ಣಿಸಲ್ಪಟ್ಟಿರುವುದೋ ಅದಕ್ಕೆ ಸಹೋಕ್ತಿಯೆಂದು ಹೆಸರು (ಉದಾ-ಪ. ೭೮)

೨೧. ವಿನೋಕ್ತಿ—(೧) ಯಾವುದೋ ಒಂದರ ಅಯೋಗದಿಂದ ಪ್ರಕೃತವಾದುದು ರಮ್ಯವಾಗಿಲ್ಲವೆಂದು ವರ್ಣಿಸಲ್ಪಟ್ಟದ್ದರೆ ವಿನೋಕ್ತ್ಯಲಂಕಾರವಾಗುವುದು (ಉದಾ-ಪ. ೭೯)

(೨) ಪ್ರಕೃತವಾದುದು ಯಾವುದೋ ಒಂದರ ಅಯೋಗದಿಂದ ರಮ್ಯವಾಗಿರುವುದೆಂದು ವರ್ಣಿಸಲ್ಪಟ್ಟದ್ದರೆ ಅದೂ ವಿನೋಕ್ತ್ಯಲಂಕಾರವಾಗುವುದು

೨೨. ಸಮಾಸೋಕ್ತಿ—(೧)ಪ್ರಸ್ತುತವು ವಾಚ್ಯವಾಗಿರಲು ಅಪ್ರಸ್ತುತವಾದುವರ ಪರಿಸ್ಫೂರ್ತಿಯಾದರೆ ಸಮಾಸೋಕ್ತ್ಯಲಂಕಾರವೆನಿಸುವುದು. (ಉದಾ-ಪ. ೮೦)(೨) ಸಾರೂಪ್ಯದಿಂದಲೂ ಸಮಾಸೋಕ್ತಿಯಾಗುವುದುಂಟು(ಉದಾ-ಪ. ೮೧)

೨೩. ಪರಿಕರ.—ವಿಶೇಷಣವು ಅಭಿಪ್ರಾಯಗರ್ಭಿತವಾಗಿದ್ದರೆ ಪರಿಕರಾಲಂಕಾರವಾಗುವುದು. (ಉದಾ-ಪ. ೮೨)

೨೪. ಪರಿಕರಾಂಕುರ—ವಿಶೇಷ್ಯವು ಅಭಿಪ್ರಾಯಗರ್ಭಿತವಾಗಿದ್ದರೆ ಪರಿಕರಾಂಕುರಾಲಂಕಾರವಾಗುವುದು (ಉದಾ-ಪ. ೮೩)

೨೫. ಶ್ಲೇಷ—ಅನೇಕಾರ್ಥವನ್ನು ಕೊಡಬಲ್ಲ ವಿಶೇಷಣವಿಶೇಷ್ಯ ಪದವಿನ್ಯಾಸಕ್ಕೆ ಶ್ಲೇಷವೆಂದು ಹೆಸರು. ಅದು ಮೊತ್ತಮೊದಲು,

(೧) ಪ್ರಕೃತಾನೇಕ ವಿಷಯ (ಉದಾ-ಪ. ೮೪)

(೨) ಅಪ್ರಕೃತಾನೇಕವಿಷಯ (ಉದಾ-ಪ. ೮೫)

(೩) ಪ್ರಕೃತಾಪ್ರಕೃತಾನೇಕ ವಿಷಯ (ಉದಾ-ಪ. ೮೬)

ಎಂದು ಮೂರು ವಿಧವಾಗುವುದು. ವರ್ಣನೆಯಲ್ಲಿ ಅನೇಕಾರ್ಥಗಳು ಪ್ರಕೃತವಾಗಿದ್ದರೆ (ಎಂದರೆ, ಅದಕ್ಕೇನಾದರೂ ಯುಕ್ತವಾದ ಪ್ರಯೋಜನವಿದ್ದರೆ) ಪ್ರಕೃತಾನೇಕ ವಿಷಯವೆನಿಸುವುದು. ಶ್ಲೋಕವು

ಒಂದೇ ಆದರೂ (ಪ. ೮೪) ಅದಕ್ಕೆ ಬ್ರಹ್ಮಪರವಾದ-ಅರ್ಥವೂ ಆಗಬಹುದು. ನರಸಿಂಹಪರವಾದ ಅರ್ಥವೂ ಆಗಬಹುದು. ಒಂದೊಂದರ್ಥವು ಒಂದೊಂದು ಪರವಾಗಿ ಪರಿಣಮಿಸುವುದರಿಂದ ಅದನ್ನು ಪ್ರಕೃತಾನೇಕ ವಿಷಯವೆಂದು ಕರೆವರು. ಅಪ್ರಕೃತಾನೇಕವಿಷಯ ಶ್ಲೇಷದಲ್ಲಿ ಯಾವುದಾದರೂ ಒಂದರ್ಥವು ಸಾಕಾಗಿದ್ದರೂ ಇನ್ನೂ ಒಂದು ತೋರಿರಬಹುದು (ಉದಾ-ಪ. ೮೫) ಇಲ್ಲಿ, ಕಣ್ಣಿಗೆ, ತಾವರೆಯು ಹೋಲಿಕೆಯಾದರೂ ಜಿಂಕೆಯು ಹೋಲಿಕೆಯಾದರೂ (ಈ ಎರಡು ಅರ್ಥಗಳೂ ಕಮಲ ಶಬ್ದಕ್ಕೆ ಇರುವುವು) ಆಗಬಹುದು. ಪ್ರಕೃತಾಪ್ರಕೃತಾನೇಕವಿಷಯ ಶ್ಲೇಷದಲ್ಲಿ ಪ್ರಕರಣದಿಂದ ಗಮ್ಯವಾಗುವ ಒಂದರ್ಥವು ಸಾಕಾಗಿದ್ದರೂ ಇನ್ನೂ ಒಂದಿರುವುದು. ಶ್ಲೇಷವು ಇನ್ನೂ ಯಾವರೀತಿಯಲ್ಲಿ ಕಾಣಬಂದರೂ ಈ ಮೂರರಲ್ಲಿ ಒಂದರಲ್ಲಿ ಅಡಕವಾಡಬಹುದು.

೨೬. ಅಪ್ರಸ್ತುತ ಪ್ರಶಂಸೆ—ಎಲ್ಲಿ ಅಪ್ರಸ್ತುತಾವೃತ್ತಾಂತವನ್ನು ವರ್ಣಿಸುವುದು ಪ್ರಸ್ತುತ ವೃತ್ತಾಂತವನ್ನು ಬೋಧಿಸುವುದರಲ್ಲಿ ಪರ್ಯವಸಾನಹೊಂದುವುದೋ ಅದಕ್ಕೆ ಅಪ್ರಸ್ತುತಾಪ್ರಶಂಸೆಯೆಂದು ಹೆಸರು. ಇದು ಐದು ವಿಧವಾಗುವುದು.

(೧) ಸಾರೂಪ್ಯನಿಬಂಧನೆ-ಬಾದರ‍್ವರ್ಣನೆಯಿಂದ ತತ್ಸ್ವರೂಪಾರ್ಥಲಾಭವಾಗುವುದು (ಉದಾ-ಪ. ೮೬)

(೨) ಸಾಮಾನ್ಯ ನಿಬಂಧನೆ (ಪ್ರಕೃತವಾದ ಒಂದು ಅರ್ಥವು ಹೇಳಬ್ಪಡಬೇಕಾಗಿರಲು ಅದನ್ನು ಪ್ರತ್ಯಾಯನಮಾಡುವುದಕ್ಕೆ ಸಾಮಾನ್ಯವಾದರ್ಥವೊಂದನ್ನು ವರ್ಣಿಸುವುದು (ಉದಾ-ಪ. ೮೮)

(೩) ವಿಶೇಷನಿಬಂಧನೆ--ಸಾಮಾನ್ಯವಾದ ಒಂದರ್ಥವು ಪ್ರಕೃತವಾಗಿರಲು ಅದನ್ನು ಪ್ರತ್ಯಾಯನಮಾಡುವುದಕ್ಕೆ ವಿಶೇಷಾರ್ಥವೊಂದನ್ನು ವರ್ಣಿಸುವುದು (ಉದಾ-ಪ. ೮೯)

(೪) ಕಾರಣನಿಬಂಧನೆ-ಪ್ರಕರಣಕ್ಕೆ ಸಂಬಂಧಪಡದ ಒಂದು ಕಾರಣವನ್ನು ಕಲ್ಪಿಸಿಕೊಂಡು ಅದರ ಕಾರ್ಯವನ್ನು ವರ್ಣನೆ ಮಾಡುವುದು ಪ್ರಸ್ತುತವಾಗಿದ್ದರೆ ಕಾರಣನಿಬಂಧನೆಯೆನಿಸುವುದು(ಉದಾ-ಪ.೯೦)

(೫) ಕಾರ್ಯನಿಬಂಧನೆ-ಪ್ರಕರಣಕ್ಕೆ ಸಂಬಂಧಪಡುವ ಒಂದು ಕಾರಣವನ್ನಿಟ್ಟುಕೊಂಡು ಅದರ ಕಾರ್ಯರೂಪವಾದಂತೆ ಅಪ್ರಸ್ತುತವಾದುದೊಂದು ಅರ್ಥವನ್ನು ವರ್ಣಿಸುವುದು (ಉದಾ-ಪ. ೯೧)

ಕಾರ್ಯಕಾರಣಗಳು ಕವಿಕಲ್ಪಿತವೂ ಆಗಬಹುದಾದುದರಿಂದ

(೬) ಕವಿಕಲ್ಪಿತಕಾರಣನಿಬಂಧನೆ (ಉದಾ-ಪ ೯೨)

(೭) ಕವಿಕಲ್ಪಿತಕಾರ್ಯನಿಬಂಧನೆ (ಉದಾ-ಪ. ೯೩)

ಎಂಬ ಇನ್ನೂ ಎರಡು ಭೇದಗಳಾಗುವುವು.

೨೭ ಪ್ರಸ್ತುತಾಂಕುರ.— ವರ್ಣಿತವಾದ ಒಂದರ್ಥವು ಪ್ರಸ್ತುತವಾಗಿರಲು ಅದರಿಂದ ಪ್ರಸ್ತುತವೇ ಆದ ಮತ್ತೊಂದರ್ಥವು ವ್ಯಕ್ತವಾಗಿದ್ದರೆ ಪ್ರಸ್ತುತಾಂಕುರಾಲಂಕಾರವೆನಿಸುವುದು. (ಅದು, ಗಮ್ಯಗಮಕ--ಭಾವಸಂಬಂಧವಿಲ್ಲದೆ ಆಗಲಾರದುದರಿಂದ ಉಪಮಾನೋಪಮೇಯಭಾವಸಂಬಂಧವೇ ಇರುವುದೆಂದು ತಿಳಿಯಬೇಕು) ಇದರಲ್ಲಿ ಸಾರೂಪ್ಯ ನಿಬಂಧನೆಯೇ ಪ್ರಧಾನವಾದುದು। (ಉದಾ-ಪ. ೯೪) ಸಂಬಂಧಾನಂತರ ನಿಬಂಧನೆಗಳೂ ಇರುವುವು. ದಿಂಜ್ಮಾತ್ರವಾಗಿ ಅವುಗಳಲ್ಲಿ ಎರಡು ಭೇದಗಳಿಗೆ ಲಕ್ಷ್ಯಗಳನ್ನು ಕಲ್ಪಿಸಿರುವೆವು (ಉದಾ-ಪ. ೯೫-೯೬) ಎಲ್ಲಿ ಕಾರ್ಯದಿಂದ ಕಾರಣವು ದ್ಯೋತಿತವಾಗುವಂತೆ ವರ್ಣಿಸಲ್ಪಡುವುದೋ ಅಲ್ಲಿ ಈ ಅಲಂಕಾರವಲ್ಲ; ಅದನ್ನು ಅನುಮಾನಾಲಂಕಾರವೆಂದೇ ತಿಳಿಯಬೇಕು.

೨೮. ಪರ್ಯಾಯೋಕ್ತ—(೧)ಗಮ್ಯವಾದ ಯಾವ ಅರ್ಥವೇ ವಿವಕ್ಷಿತವಾಗಿರಲು ಅದನ್ನೇ ಭಂಗ್ಯಂತರದಿಂದ ವಿವಕ್ಷಿತರೂಪಕ್ಕೂ ಚಾರುತರವಾದ!ರೂಪಾಂತರದಿಂದ ವರ್ಣಿಸಲ್ಪಡುವುದೋ ಅದು ಪರ್ಯಾಯೋಕ್ತವೆನಿಸುವುದು ಇದು ಭಂಗ್ಯಂತರಾಶ್ರಯವಾಯಿತು (ಉದಾ-ಪ. ೯೭)

(೨) ಯಾವುದೋ ಒಂದು ಕಾರ್ಯವ್ಯಾಜದಿಂದ ಇಷ್ಟಾರ್ಥಲಾಭಕ್ಕೆ ಬಾಧಕವಾಗಿರುವುದನ್ನು ಹೋಗಲಾಡಿಸಿ ಇಷ್ಟಾರ್ಥವು ಲಭಿಸುವಂತೆ ಮಾಡುವುದು ವರ್ಣಿತವಾಗಿದ್ದರೆ ಅದೂ ಪರ್ಯಾಯೋಕ್ತವೇ ಆಗುವುದು ಹೀಗಿದ್ದರೆ ವ್ಯಾಜಬದ್ಧಪರ್ಯಾಯೋಕ್ತವೆನಿಸುವುದು (ಉದಾ-ಪ. ೯೮)

೨೯. ವ್ಯಾಜಸ್ತುತಿ—ನಿಂದೆಯಿಂದ ಸ್ತುತಿಯೂ ಸ್ತುತಿಯಿಂದ

ನಿಂದೆಯೂ ವ್ಯಕ್ತವಾಗುವಂತೆ ವರ್ಣಿಸಿದ್ದರೆ ವ್ಯಾಜಸ್ತುತ್ಯಲಂಕಾರವಾಗುವುದು

(೧) ನಿಂದೆಯಿಂದ ಸ್ತುತಿ (ಉದಾ-ಪ. ೯೯)

(೨) ಸ್ತುತಿಯಿಂದ ನಿಂದೆ (ಉದಾ-ಪ. ೧೦೦)

ಈ ಚಮತ್ಕಾರವು ಭಿನ್ನವಿಷಯಗತವಾಗಿಯೂ ಇರುವುದುಂಟು.

(೩) ಭಿನ್ನವಿಷಯಗತನಿಂದಾಸ್ತುತಿ (ಉದಾ-ಪ. ೧೦೧)

(೪) ಭಿನ್ನವಿಷಯಗತಸ್ತುತಿನಿಂದೆ (ಉದಾ-ಪ, ೧೦೨)

(೫) ಒಂದರ ಸ್ತುತಿಯಿಂದ ಬೇರೊಂದರ ಸ್ತುತಿಯೂ ವ್ಯಕ್ತವಾಗಬಹುದು (ಉದಾ-ಪ, ೧೦೪)

೩೦ ವ್ಯಾಜನಿಂದೆ—ಎಲ್ಲಿ ಅಪ್ರಸ್ತುತವಾದ ಒಂದರ ನಿಂದೆ ಪ್ರಸ್ತುತವಾದ ಬೇರೊಂದರ ನಿಂದೆಯಾಗಿ ಪರ್ಯವಸಾನ ಹೊಂದುವುದೋ ಅದಕ್ಕೆ ವ್ಯಾಜನಿಂದೆಯೆಂದು ಹೆಸರು (ಉದಾ-ಪ, ೧೦೩)

೩೧, ಆಕ್ಷೇಪ—(೧) ಒಂದರ್ಥವು ಉಕ್ತವಾಗಲು ಆಲೋಚನೆಯಿಂದ ಅದರ ವೈಯರ್ಥ್ಯವು ಕಾಣಬಂದು ಆ ಉಕ್ತಾರ್ಥವು ಪ್ರತಿಷೇಧಿಸಲ್ಪಟ್ಟದ್ದರೆ (ಎಂದರೆ, ಅದು ಬೇಡವೆಂದು ಹೇಳಿದ್ದರೆ) ಆಕ್ಷೇಪಾಲಂಕಾರವಾಗುವುದು (ಉದಾ-ಪ, ೧೦೫)

(೨) ಎಲ್ಲಿ ಒಂದು ನಿಷೇಧವು ಅನುಪಪದ್ಯಮಾನವಾಗಿ ಆಭಾಸರೂಪ ಹೊಂದುತ್ತಿದ್ದರೂ ನಿಷೇಧಿಸಲ್ಪಡುವುದರಲ್ಲಿ ನಿಷ್ಠವಾಗಿರುವ ವಿಶೇಷಾರ್ಥಕ್ಕೆ ಪ್ರತೀತಿಕಾರಿಯಾಗಿರುವಂತೆ ವರ್ಣಿಸಲ್ಪಡುವುದೋ ಅದೂ ಆಕ್ಷೇಪಾಲಂಕಾರವು (ಉದಾ-ಪ, ೧೦೬) (ಇಲ್ಲಿ ನಿಷೇಧವೆಂದರೆ ‘ಇಲ್ಲ ‘ಅಲ್ಲ’ ಎಂಬ ಅನಂಗೀಕಾರಾರ್ಥವು ದ್ಯೋತಿತವಾಗುವಂತಿರುವುದು. ಎಂದರ್ಥವು)

(೩) ಎಲ್ಲಿ, ವಿಧಿ (ವಿಧಿಯೆಂದರೆ, ‘ಮಾಡು’ ‘ಆಗಬಹುದು’ ಇತ್ಯಾದ್ಯಂಗೀಕಾರಾರ್ಥವನ್ನು ಕೊಡುವುದೆಂದರ್ಥವು) ಶಬ್ದದಿಂದ ಪ್ರತಿಪಾದಿತವಾಗಿದ್ದರೂ ಅದರಲ್ಲಿ ಅನಿಷ್ಟವು ಗೋಚರವಾಗಿ ಅನುಪಪದ್ಯಮಾನವಾಗಲು ವಿಧಿವಿಷಯಕವಾದ ನಿಷೇಧವು ಗಮ್ಯವಾದರೆ ಅದೂ ಆಕ್ಷೇಪಾಲಂಕಾರವೆನಿಸುವುದು (ಉದಾ-ಪ. ೧೦೭)

೩೨ ವಿರೋಧಾಭಾಸ—(ವಿರೋಧವೆಂದರೆ ಒಂದರ ಅಭಾವತ್ವ ಅದರ ಅಭಾವವ್ಯಾಪ್ಯತೆಯೂ ಆಗಬಹುದು, ಆಭಾಸವೆಂದರೆ ಅನುಪಪದ್ಯಮಾನತ್ವ) ಆ-ಆ ಅಭಾವಗಳಾಗಲೀ, ಆ-ಆ ಅಭಾವವ್ಯಾಪ್ಯಗಳಾಗಲೀ ಒಂದೇ ಸ್ಥಳದಲ್ಲಿ ಇರುವುದು ಸಾಧ್ಯವಲ್ಲದಿದ್ದರೂ ಅವು ಯಾವ ಸ್ಥಳದಲ್ಲಿ ಸಾಧ್ಯವಾಗಿರುವಂತೆ ವರ್ಣಿತವಾಗಿರುವುದೋ ಅಲ್ಲಿ ವಿರೋಧಾಭಾಸಾಲಂಕಾರವೆಂದು ಹೆಸರು (ಉದಾ-ಪ. ೧೦೮)

೩೩ ವಿಭಾವನೆ—ಎಂದರೆ ಕಾರ್ಯೋತ್ಪತ್ತಿಗೆ ತಕ್ಕ ಕಾರ್ಯಸಂಪತ್ತಿಯಿಲ್ಲದಿರುವುದು, ಇದರಲ್ಲಿ ಅನೇಕ ಭೇದಗಳಿರುವುವು

(೧) ಕಾರಣವಿಲ್ಲದೆಯೇ ಕಾರ್ಯಹುಟ್ಟುವುದು; (ಉದಾ-ಪ, ೧೦೯)

(೨) ಕಾರಣವು ಸಮಗ್ರವಾಗಿರದಿದ್ದರೂ ಕಾರ್ಯವು ಹುಟ್ಟುವುದು (ಉದಾ-ಪ, ೧೧೦)

(೩) ಪ್ರತಿಬಂಧಕವಿದ್ದರೂ ಕಾರ್ಯವು ಹುಟ್ಟುವುದು (ಉದಾ--ಪ, ೧೧೧)

(೪) ಕಾರಣವಲ್ಲದುದರಿಂದ ಕಾರ್ಯವು ಹುಟ್ಟುವುದು (ಉದಾ-_ಪ, ೧೧೨)

(೫) ವಿರುದ್ಧಕಾರಣದಿಂದ ಕಾರ್ಯವು ಹುಟ್ಟುವುದು(ಉದಾ-ಪ. ೧೧೩)

(೬) ಕಾರ್ಯದಿಂದಲೇ ಕಾರಣವುಂಟಾಗುವುದು (ಉದಾ-ಪ. ೧೧೪)

೩೪. ವಿಶೇಷೋಕ್ತಿ—ಕಾರಣವು ಪುಷ್ಕಳವಾಗಿದ್ದರೂ ಕಾರ್ಯವು ಹುಟ್ಟದಿದ್ದಂತೆ ವರ್ಣಿತವಾಗಿದ್ದರೆ ವಿಶೇಷೋಕ್ತಿಯೆಂದು ಹೆಸರು (ಉದಾ-ಪ. ೧೧೫)

೩೫. ಅಸಂಭವ—ಒಂದು ಕಾರ್ಯವು ದುಷ್ಕರವಾಗಿರುವುದರಿಂದ ಅಘಟಮಾನವಾಗಿರಲು ಅದರ ನಿಷ್ಪತ್ತಿಯ(ನಿಷ್ಪತ್ತಿಯೆಂದರೆ ಹುಟ್ಟುವುದು) ದುಷ್ಕರತ್ವವನ್ನು ಖ್ಯಾಪನಮಾಡಿದ್ದರೆ ಅಸಂಭವಾಲಂಕಾರವಾಗುವುದು (ಉದಾ-ಪ. ೧೧೬)

೩೬. ಅಸಂಗತಿ—(೧) ಕಾರ್ಯಕಾರಣಗಳು (ಅವುಗಳಿಗೆ ಸಮಾನಾಧಿಕರಣ್ಯವೇ ನಿಯಮವಾಗಿದ್ದರೂ) ಭಿನ್ನದೇಶಗತವಾಗಿರುವಂತೆ ವರ್ಣಿವಾಗಿದ್ದರೆ ಅಸಂಗತ್ಯಲಂಕಾರವೆನಿಸುವುದು (ಉದಾ-ಪ. ೧೧೭)

(೨) ಒಂದು ಸ್ಥಳದಲ್ಲಿ ಮಾಡಬೇಕಾಗಿದ್ದುದನ್ನು ತದ್ಭಿನ್ನವಾದ ಸ್ಥಳದಲ್ಲಿ ಮಾಡಿದಂತೆ ವರ್ಣಿತವಾಗಿದ್ದರೆ ಅದೂ ಅಸಂಗತಿ (ಉದಾ-ಪ.೧೧೮)

(೩) ಒಂದನ್ನು ಮಾಡುವುದಕ್ಕೆ ಹೊರಟು ತದ್ವಿರುದ್ಧಕಾರ್ಯವನ್ನು ಮಾಡಿದರೆ ಅದೂ ಅಸಂಗತಿಯೇ (ಉದಾ-ಪ. ೧೧೯)

೩೭. ವಿಷಮ—(೧) ಅನನುರೂಪಾರ್ಥಗಳಿಗೆ ಎಲ್ಲಿ ಘಟನವು ವರ್ಣಿತವಾಗುವುದೋ ಅದು ವಿಷಮಾಲಂಕಾರವೆನಿಸುವುದು (ಉದಾ-ಪ. ೧೨೦)

(೨) ಕಾರಣವು ಯಾವ ರೂಪವುಳ್ಳುದೋ ತದ್ವಿರುದ್ಧರೂಪವುಳ ಕಾರ್ಯೋತ್ಪತ್ತಿ ವರ್ಣಿತವಾಗಿದ್ದರೆ ಅದೂ ವಿಷಮಾಲಂಕಾರವು (ಉದಾ-ಪ. ೧೨೧)

(೩) ವ್ಯಾಪಾರವು ಇಷ್ಟಪ್ರಾಪ್ತಿಗೆ ಅನುಕೂಲವಾಗಿದ್ದರೂ ಇಷ್ಟವು ಲಭಿಸದೆ ಅನಿಷ್ಟಾವಾಪ್ತಿಯಾಗಿದ್ದರೆ ಅದೂ ವಿಷಮಾಲಂಕಾರವು (ಉದಾ-ಪ.೧೨೨)

(೪) ಒಂದಕ್ಕೆ ಉಳಿಗಾಲವಿಲ್ಲದೆ ಮತ್ತೊಂದನ್ನು ಆಶ್ರಯಿಸಲು ಅದಕ್ಕೂ ಆಶ್ರಯವಾದುದಕ್ಕೂ ಅನಿಷ್ಟಾವಾಪ್ತಿಯಾದರೆ ಅದೂ ವಿಷಮಾಲಂಕಾರವು (ಉದಾ-ಪ. ೧೨೩)

(೫) ಪರಾನಿಷ್ಟಕ್ಕೆ ಯತ್ನಿಸಲು ತನಗೇ ಅನಿಷ್ಟಾವಾಪ್ತಿಯಾಗುವುದೂ ಒಂದು ಭೇದವು (ಉದಾ-ಪ. ೧೨೪)

ಪರಾನಿಷ್ಟಕ್ಕೆ ಯತ್ನಿಸಲು ತನಗೂ, ಅದಕ್ಕೂ ಅನಿಷ್ಟಾವಾಪ್ತಿಯಾಗುವುದೆಂದು ಇದೇ ಭೇದವೆಂದು ಕುವಲಯಾನಂದಮತವು. ಆದರೂ ಅಲ್ಲಿ ಕೊಡುವ ಉದಾಹರಣೆಯಿಂದ ಮೇಲೆ ಹೇಳಿದ ಅರ್ಥವು ಸೂಚಿತವಾಗುವುದೆಂದು ಹೇಳುವರ ಮತವನ್ನು ಅಂಗೀಕರಿಸಿ ನಾವು ತದನುಕೂಲವಾದ ಲಕ್ಷ್ಯವನ್ನು ಕಲ್ಪಿಸಿರುವೆವು.

(೬) ಕಾರ್ಯಕ್ಕೆ ಯತ್ನಿಸಿದರೆ ಕೇವಲಾನಿಷ್ಟವೇ ಪ್ರಾಪ್ತಿಯಾಗುವುದೂ ಒಂದು ಭೇದವು (ಉದಾ-ಪ ೧೨೫)

(೭) ಕೇವಲೇಷ್ಟಾನವಾಪ್ತಿಯೂ ಒಂದು ಭೇದವು (ಉದಾ-ಪ. ೧೨೬)

(೯) ಸ್ವಪ್ನೇಷ್ಟಾನವಾಪ್ತಿಯೂ ಒಂದು ಭೇದವು (ಉದಾ—ಪ. ೧೨೮)

(೧೦) ಯಾವಾಗಲೋ ಒಂದುವೇಳೆ ಇಷ್ಟಪ್ರಾಪ್ತಿಯಾದರೂ ಇಷ್ಟಪ್ರಾಪ್ತಿಯಾಗದೆಯೋ ಇರುವುದು (ಉದಾ-೧೨೯)

(೧೧) ಇಷ್ಟಪ್ರಾಪ್ತಿಯಾಗದಿದ್ದರೂ ಅದು ಪ್ರಾಪ್ತವಾದಂತೆ ಭ್ರಮಿಸುವಿಕೆಯನ್ನು ವರ್ಣಿಸುವುದು (ಉದಾ-ಪ. ೧೩೦)

೩೮. ಸಮ—(೧) ಅನುರೂಪವಾದ ಎರಡು ವಸ್ತುಗಳ ಸಮಾಗಮವು ವರ್ಣಿತವಾಗಿದ್ದರೆ ಸಮಾಲಂಕಾರವಾಗುವುದು(ಉದಾ-ಪ. ೧೩೧)

(೨) ಕಾರ್ಯಕಾರಣಗಳ ಸಾರೂಪ್ಯ (ಸಮಾನುಗುಣತ್ವ)ವು ವರ್ಣಿತವಾಗಿದ್ದರೆ ಅದೂ ಸಮಾಲಂಕಾರವು (ಉದಾ-ಪ. ೧೩೨)

(೩) ಯಾವ ಇಷ್ಟಸಿದ್ಧಿಗಾಗಿ ಕರ್ತೃವಿನ ವ್ಯಾಪಾರವೋ ಅದು ಅನಿಷ್ಟವಿಲ್ಲದೆ ಇಷ್ಟಸಿದ್ಧಿಗೆ ಸಾಧಕವಾದರೆ ಅದೂ ಸಮಾಲಂಕಾರವು(ಉದಾ-ಪ. ೧೩೩)

೩೯. ವಿಚಿತ್ರ—ಯಾವ ಕಾರಣಕ್ಕೆ ಯಾವ ಫಲವೋ ಆ ಕಾರಣದಿಂದ ತದ್ವಿಪರೀತಫಲವಾದಂತೆ ವರ್ಣಿತವಾಗಿದ್ದರೆ ವಿಚಿತ್ರಾಲಂಕಾರವು (ಉದಾ-ಪ. ೧೩೪)

(ಯಾವ ವ್ಯಾಪಾರದಿಂದ ಯಾವ ಫಲವು ಹುಟ್ಟಬೇಕೋ ತದ್ವಿಪರೀತ ಫಲನಿಷ್ಪತ್ತಿಯನ್ನು ಉದ್ದೇಶಿಸಿ ಅದೇ ವ್ಯಾಪಾರಕ್ಕೆ ತೊಡಗುವುದರಿಂದ ವಿಚಿತ್ರವೆಂಬ ಹೆಸರು ಅನ್ವರ್ಥವಾಗುವುದು)

೪೦. ಅಧಿಕ—(೧) ಆಧಾರವು ದೊಡ್ಡದಾಗಿದ್ದರೂ ಆಧೇಯವು ಅದಕ್ಕೂ ದೊಡ್ಡದೆಂದು ವರ್ಣಿಸಿದ್ದರೆ ಅಧಿಕಾಲಂಕಾರವಾಗುವುದು (ಉದಾ-ಪ. ೧೩೫)

(೨) ಯಾವ ಆಧೇಯವು ದೊಡ್ಡದೆಂದು ಪ್ರಸಿದ್ಧವಾಗಿರುವುದೋ ಆಧಾರವು ಅದಕ್ಕೂ ದೊಡ್ಡದೆಂದು ವರ್ಣಿಸುವುದೂ ಅಧಿಕಾಲಂಕಾರವು (ಉದಾ-ಪ. ೧೩೬)

೪೧. ಅಲ್ಪ—ಎಲ್ಲಿ ಆಧೇಯದ ಸೂಕ್ಷ್ಮತೆ ಆಧಾರಸೌಕ್ಷ್ಮ್ಯಪರ್ಯವಸಾಯಿಯಾಗುವುದೋ ಅದು ಅಲ್ಪಾಲಂಕಾರವು (ಉದಾ-ಪ. ೧೩೭)

೪೨. ಅನ್ಯೋನ್ಯ—ಎರಡು ವಸ್ತುಗಳ ಸದ್ಭಾವವಾಗಲೀ, ವ್ಯಾಪಾರವಾಗಲೀ ಪರಸ್ಪರವಾಗಿ ಉಪಕಾರಜನಕವಾಗುವಂತೆ ವರ್ಣಿತವಾಗಿದ್ದರೆ ಅನ್ಯೋನ್ಯಾಲಂಕಾರವೆನಿಸುವುದು (ಉದಾ-ಪ, ೧೩೮)

೪೩. ವಿಶೇಷ—(೧) ಪ್ರಸಿದ್ಧವಾದ ಆಧಾರವಿಲ್ಲದಿದ್ದರೂ ಆಧೇಯ ಸದ್ಭಾವವು ವರ್ಣಿಸಲ್ಪಟ್ಟರೆ ವಿಶೇಷಾಲಂಕಾರವು (ಉದಾ-ಪ, ೧೩೯)

(೨) ಒಂದೇವಸ್ತು ಅನೇಕಾಧಾರಗಳಲ್ಲಿ ಸ್ಥಿತವಾಗಿರುವಂತೆ ವರ್ಣಿತವಾಗಿದ್ದರೂ ವಿಶೇಷಾಲಂಕಾರವಾಗುವುದು (ಉದಾ-ಪ. ೧೪೦)

(೩) ಕಾರ್ಯಾನುಕೂಲ ಯತ್ನವು ಸ್ವಲ್ಪವೇ ಆಗಿದ್ದರೂ ಅಶಕ್ಯವಾದ ವಸ್ತ್ವಂತರವು ಸಾಧಿತವಾದಂತೆ ವರ್ಣಿತವಾಗಿದ್ದರೂ ವಿಶೇಷಾಲಂಕಾರವೇ (ಉದಾ-ಪ. ೧೪೧)

೪೪. ವ್ಯಾಘಾತ—(೧) ಯಾವುದು ಯಾವುದಕ್ಕೆ ಸಾಧನವೆಂದು ಲೋಕಪ್ರಸಿದ್ಧವಾಗಿರುವುದೋ ತದ್ವಿರುದ್ಧ ಕಾರ್ಯಕ್ಕೆ ಯಾವನಾದರೂ ಅದನ್ನು ಸಾಧನವಮಾಡಿಕೊಂಡಂತೆ ವರ್ಣಿತವಾಗಿದ್ದರೆ ವ್ಯಾಘಾತಾಲಂಕಾರವು (ಉದಾ-ಪ. ೧೪೨)

(೨) ಒಬ್ಬನು ಒಂದು ವಸ್ತುವನ್ನು ಒಂದು ಕಾರ್ಯಕ್ಕೆ ಸಾಧನವೆಂದು ಅಂಗೀಕರಿಸಿರಲು ಅವನಿಗೆ ಪ್ರತಿದ್ವಂದ್ವಿಯಾದವನು ತದ್ವಿರುದ್ಧ ಕಾರ್ಯಕ್ಕೆ ಅದನ್ನೇ ಸಾಧನವಮಾಡಿಕೊಂಡಂತೆ ವರ್ಣಿತವಾಗಿದ್ದರೆ ಅದೂ ವ್ಯಾಘಾತಭೇದವು (ಉದಾ-ಪ. ೧೪೩)

(೩) ಒಂದು ಕಾರ್ಯಕ್ಕೆ ನಿಷ್ಪಾದಕವಾಗುವುದೆಂದು ಒಬ್ಬನಿಂದ ಸಂಭಾವಿತವಾದ ವಸ್ತುವಿನಿಂದ ಆ ಕಾರ್ಯ ವಿರೋಧಿಯಾದಕಾರಣವಾಗಿ ಸೌಕರ್ಯದಿಂದ ಸಮರ್ಥಿಸಲ್ಪಡುವುದಾದರೆ ಅದೂ ಒಂದು ವ್ಯಾಘಾತಭೇದವು (ಉದಾ-ಪ. ೧೪೪)

೪೫. ಕಾರಣಮಾಲೆ—ಪೂರ್ವಪೂರ್ವವಾದುದು ಉತ್ತರೋತ್ತರಕ್ಕೆ ಕಾಣವಾಗಿಯಾಗಲೀ (ಉದಾ-ಪ. ೧೪೫) ಉತ್ತರೋತ್ತರವಾದುದು ಪೂರ್ವಪೂರ್ವಕ್ಕೆ ಕಾರಣವಾಗಿಯಾಗಲೀ (ಉದಾ-ಪ. ೧೪೬) ಇರುವಂತೆ ಜೋಡಿಸಲ್ಪಟ್ಟು ವರ್ಣಿತವಾಗಿದ್ದರೆ ಕಾರಣಮಾಲೆಯೆನಿಸುವುದು.

೪೬. ಏಕಾವಳಿ—(೧) ಉತ್ತರೋತ್ತರವಾದುದು ಪೂರ್ವಪೂರ್ವಕ್ಕೆ ವಿಶೇಷಣ ಭಾವವನ್ನು ವಹಿಸಿದ್ದರೂ (ಉದಾ-ಪ. ೧೪೭-೧೪೮) (೨) ಪೂರ್ವಪೂರ್ವವಾದುದೇ ಉತ್ತರೋತ್ತರವಾಗಿರುವುದಕ್ಕೆ ವಿಶೇಷಣಭಾವವನ್ನು ವಹಿಸಿದ್ದರೂ (ಉದಾ-ಪ. ೧೪೯) ಒಂದರಿಂದ ಆರಂಭಿಸಿ ಒಂದಕ್ಕೊಂದನ್ನು ಕೊಕ್ಕೆಯಂತೆ ಸೇರಿಸಿಕೊಂಡು ಬಂದಿದ್ದರೆ ಏಕಾವಳ್ಯಲಂಕಾರವೆನಿಸುವುದು.

೪೭. ಮಾಲಾದೀಪಕ—ದೀಪಕವೂ ಏಕಾವಳಿಯೂ ಸಂಕಲಿತವಾಗಿದ್ದರೆ ಮಾಲಾದೀಪಕವೆನಿಸುವುದು (ಉದಾ-ಪ. ೧೫೦)

೪೮. ಸಾರ—ಉತ್ತರೋತ್ತರ ಬರುವುದು ಪೂರ್ವಪೂರ್ವವಾದುದಕ್ಕೆ ಉತ್ಕೃಷ್ಟತರವಾದುದಾಗಿ ವರ್ಣಿತವಾಗಿದ್ದರೆ ಸಾರಾಲಂಕಾರವೆನಿಸುವುದು. ಇದರಲ್ಲಿ—

(೧) ಶ್ಲಾಘ್ಯಗುಣೋತ್ಕರ್ಷ (ಉದಾ-ಪ. ೧೫೧)

(೨) ಅಶ್ಲಾಘ್ಯಗುಣೋತ್ಕರ್ಷ (ಉದಾ-ಪ. ೧೫೨)

(೩) ಉಭಯರೂಪ (ಉದಾ-ಪ. ೧೫೩)

ಎಂದು ಮೂರುಬೇಧಗಳಿರುವುವು.

೪೯. ಯಥಾಸಂಖ್ಯಾ—ಕ್ರಮವಾಗಿ ಎರಡು ಸಮುದಾಯಗಳಿದ್ದು ಒಂದುಸಮುದಾಯದ ಭಾಗಗಳು ಇನ್ನೊಂದು ಸಮುದಾಯದ ಭಾಗಗಳೊಡನೆ ಉಕ್ತಕ್ರಮದಲ್ಲಿಯೇ ಅನ್ವಯಿಸುವುದಾದರೆ ಯಥಾಸಂಖ್ಯಾಲಂಕಾರವೆನಿಸುವುದು (ಉದಾ-ಪ, ೧೫೪)

೫೦. ಪರ್ಯಾಯ—ಒಂದೇ ಅರ್ಥಕ್ಕೆ ಪರ್ಯಾಯವಾಗಿ ಅನೇಕಾಧಾರ ಸಂಶಯವಿದ್ದರೆ ಪರ್ಯಾಯಾಲಂಕಾರವಾಗುವುದು. ಇದರಲ್ಲಿ ಅನೇಕ ಭೇದಗಳಿರುವುವು.

(೧) ಶಬ್ದಪರ್ಯಾಯ-ಇದರಲ್ಲಿ ಪ್ರಾಯಕವಾಗಿ ಪರ್ಯಾಯವು ಶಬ್ದದಿಂದ ವ್ಯಕ್ತವಾಗುವುದು. (ಉದಾ-ಪ ೧೫೫)

(೨) ಶುದ್ಧಪರ್ಯಾಯ-ಇದೂ ಶಬ್ದಪರ್ಯಾಯದ ಭೇದವೇ (ಉದಾ-ಪ. ೧೫೬)

(೩) ಸಂಕೋಚಪರ್ಯಾಯ- ಎಂದರೆ ಒಂದುವಸ್ತು, ಬರುತಬರುತ

ಸಂಕುಚಿತವಾದಂತೆ ವರ್ಣಿತವಾಗಿರುವುದು (ಉದಾ-ಪ. ೧೫೭)

(೪) ವಿಕಾಸಪರ್ಯಾಯ-ಎಂದರೆ ಒಂದುವಸ್ತು ಬರುತ ಬರುತ ಹೆಚ್ಚಿದಂತೆ ವರ್ಣಿತವಾಗಿರುವುದು (ಉದಾ-ಪ, ೧೫೮)

(೫) ಒಂದೇವಸ್ತುವಿನಲ್ಲಿ ಅನೇಕವೃತ್ತಿಗಳು ಪರ್ಯಾಯದಿಂದ ವರ್ಣಿತವಾಗಿದ್ದರೆ ಅದೂ ಪರ್ಯಾಯಾಲಂಕಾರವು (ಉದಾ-ಪ, ೧೫೯)

೫೧. ಪರಿವೃತ್ತಿ—ನ್ಯೂನಾಧಿಕವಸ್ತುಗಳಿಗೆ ಪರಸ್ಪರವಾಗಿ ವಿನಿಮಯವಿದ್ದರೆ ಪರಿವೃತ್ತ್ಯಲಂಕಾರವೆನಿಸುವುದು (ಉದಾ-ಪ. ೧೬೦)

೫೨ ಪರಿಸಂಖ್ಯೆ—ಒಂದು ಧರ್ಮವನ್ನು ಒಂದೆಡೆಯಲ್ಲಿಲ್ಲವೆಂದು ಹೇಳಿ ಅದನ್ನು ಮತ್ತೊಂದೆಡೆಗೆ ತೆಗೆದುಕೊಂಡು ಹೋದರೆ ಪರಿಸಂಖ್ಯಾಲಂಕಾರವೆನಿಸುವುದು (ಇಲ್ಲಿ, ಇಲ್ಲವೆಂದು ಹೇಳುವುದಕ್ಕೆ ನಿಷೇಧವೆಂದೂ ಮತ್ತೊಂದೆಡೆಗೆ ತೆಗೆದುಕೊಂಡು ಹೋಗುವುದಕ್ಕೆ ನಿಯಂತ್ರಣವೆಂದೂ ಸಂಕೇತವು)

(೧) ನಿಷೇಧವು ಶಬ್ದದಿಂದ ತೋರಬರಬಹುದು (ಉದಾ-ಪ. ೧೬೧)

(೨) ಅರ್ಥದಿಂದ ತೋರಬರಬಹುದು (ಉದಾ-ಪ, ೧೬೨)

೫೩. ವಿಕಲ್ಪ—ಪರಸ್ಪರ ನಿರಪೇಕ್ಷಗಳಾದ ಎರಡು ಪದಾರ್ಥಗಳು ತುಲ್ಯಬಲಗಳಾಗಿಯೂ ಪರಸ್ಪರ ವಿರುದ್ಧಗಳಾಗಿಯೂ ಇರಲು ಅವುಗಳಲ್ಲಿ ಯಾವುದಾದರೂ ಒಂದರ ಪ್ರಾಪ್ತಿಯಿಂದ ಮತ್ತೊಂದರ ಪ್ರತಿಕ್ಷೇಪವಾದರೆ ವಿಕಲ್ಪಾಲಂಕಾರವೆನಿಸುವುದು (ಉದಾ-ಪ. ೧೬೩)

೫೪. ಸಮುಚ್ಚಯ—(೧) ಅನೇಕ ಪದಾರ್ಥಗಳು ಏಕಕಾಲದಲ್ಲಿ ಬರುವ ಹಾಗಿರಲು ಅವೆಲ್ಲವನ್ನೂ ಒಂದೇ ಸ್ಥಳದಲ್ಲಿ ನಿಬಂಧನ ಮಾಡುವುದು ಸಮುಚ್ಚಯಾಲಂಕಾರವೆನಿಸುವುದು. ಇದು ಪ್ರಥಮಭೇದವು (ಉದಾ-ಪ. ೧೬೪)

(೨) ಅನೇಕ ಕಾರಣಗಳು ಅನ್ಯೋನ್ಯವಾಗಿ ನಾನು ಮೊದಲು ನಾನು ಮೊದಲು ಎನ್ನುವ ಹಾಗೆ (ಅಹಂಪ್ರಥಮಿಕಯಾ) ಏಕಕಾಲದಲ್ಲಿ ಒಂದೇ ಕಾರ್ಯಸಾಧನಕ್ಕೆ ಹೊರಟಂತಿದ್ದರೆ ಅದೂ ಸಮುಚ್ಚಯಾಲಂಕಾರವು. ಇದು ದ್ವಿತೀಯಭೇದವು (ಉದಾ-ಪ. ೧೬೫)

೫೫. ಕಾರಕದೀಪಕ—ಒಂದೇ ಕಾರಕಕ್ಕೆ ಸಂಬಂಧಪಟ್ಟು ನಿ

ಯಥಾಕ್ರಮವಿಲ್ಲದಿರುವ ಗುಣಕ್ರಿಯಾರೂಪ ಧರ್ಮಗಳ ಗುಂಫವು ಕಾರಕ ದೀಪಕವೆನಿಸುವುದು (ಉದಾ-ಪ, ೧೬೬)

೫೬. ಸಮಾಧಿ:—ಯಾವುದಾದರೂ ಒಂದು ಕಾರಣದಿಂದ ಪ್ರಾರಿಪ್ಸಿತವಾದ ಕಾರ್ಯಕ್ಕೆ ಕಾರಣಾಂತರ ಸನ್ನಿಧಿಯಿಂದ ಸೌಕರ್ಯವುಂಟಾದಂತೆ ವರ್ಣಿತವಾಗಿದ್ದರೆ ಸಮಾಧ್ಯಲಂಕಾರವೆಂದು ಹೆಸರು. (ಉದಾ-ಪ. ೧೬೩)

೫೭. ಪ್ರತ್ಯನೀಕ. ಪ್ರಬಲನಾದ ಶತ್ರುವಿನಮುಂದೆ ಪರಾಕ್ರಮವನ್ನು ಮಾಡಿದಂತೆ ವರ್ಣಿತವಾಗಿದ್ದರೆ ಪ್ರತ್ಯನೀಕಾಲಂಕಾರವೆಂದು ಹೆಸರು (ಉದಾ-ಪ, ೧೬೮) (ಎಂದರೆ ಪ್ರಬಲನಾದ ಶತ್ರುವಿಗೆ ಪ್ರತೀಕಾರವು ಅಸಾಧ್ಯವಾಗದಿರಲು ಅವನಿಗೆ ಬಾಧೆಯಾದರೂ ಉಂಟಾಗುವಂತೆ ಮಾಡುವುದೆಂದರ್ಥವು)

೫೮. ಕಾವ್ಯಾರ್ಥಾಪತ್ತಿ—ಯಾವ ಸ್ಥಲದಲ್ಲಿ ದುಷ್ಕರವಾದ ಅರ್ಥವೇ ಸಿದ್ಧವಾಗುತ್ತಿರಲು ಇನ್ನು ಸುಕರವಾದ ಅರ್ಥವು ಸಿದ್ಧಿಸುವುದೆಂದು ಹೇಳಬೇಕಾದುದೇನು? (ಇದಕ್ಕೆ ಕೈಮುತಿಕನ್ಯಾಯವೆಂದು ಹೆಸರು) ಎಂದು ವರ್ಣಿತವಾಗಿರುವುದೋ ಅದಕ್ಕೆ ಕಾವ್ಯಾರ್ಥಾಪ್ರತ್ತ್ಯಲಂಕಾರವೆಂದು ಹೆಸರು (ಉದಾ-ಪ. ೧೬೯)

೫೯ ಕಾವ್ಯಲಿಂಗ—ಸಮರ್ಥನವನ್ನು ಅಪೇಕ್ಷಿಸುವ ಅರ್ಥವನ್ನು ಹೇತುಬಲದಿಂದ ಸಮರ್ಥನ ಮಾಡುವುದು ಕಾವ್ಯಲಿಂಗಾಲಂಕಾರವೆನಿಸುವುದು. ಇದರಲ್ಲಿ ಈ ಭೇದಗಳಿರುವುವು—

(೧)ವಾಕ್ಯಾರ್ಥಹೇತುಕ-ವಾಕ್ಯದ ಅರ್ಥವು ಸಮರ್ಥನವನ್ನು ಅಪೇಕ್ಷಿಸುತ್ತಿರಲು ಅದನ್ನು ಹೇತುವಿನಿಂದ ಸಮರ್ಥಿಸುವುದು (ಉದಾ-ಪ, ೧೭೦) ಹೀಗೆಯೇ (೨) ಪದಾರ್ಥಹೇತುಕ (ಉದಾ-ಪ,೧೭೧)

(೩) ವಾಕ್ಯಾರ್ಥಪದಾರ್ಥಹೇತುಕ (ಉದಾ-ಪ. ೧೭೨)

(೪) ವಾಕ್ಯಾರ್ಥವು ಸಮರ್ಥನೀಯವಾಗಿರಲು ಪದಾರ್ಥಹೇತುಕ (ಉದಾ-ಪ. ೧೭೩)

(೫) ಸಮರ್ಥಿಸಲ್ಪಡಬೇಕಾದ ಎರಡು ಅರ್ಥಗಳು ಪರಸ್ಪರ ವಿರು

ದ್ಧವಾಗಿದ್ದು ಕ್ರಮವಾಗಿ ಒಂದಕ್ಕೊಂದು ಹೇತುವಾಗಿದ್ದರೆ ಅದೂ ಒಂದು ಭೇದವು (ಉದಾ-ಪ. ೧೩೪)

(೬) ಸಮರ್ಥಿಸಲ್ಪಡಬೇಕಾದ ಎರಡು ಅರ್ಥಗಳು ಪರಸ್ಪರ· ವಿರುದ್ಧವಾಗಿದ್ದರೂ ಒಂದೇ ಹೇತುವಾಗುವುದೂ ಒಂದು ಭೇದವು (ಉದಾ-ಪ. ೧೩೫)

(೭) ಪದ್ಯ ೧೩೬-ಇಂತಹ ಸ್ಥಳದಲ್ಲಿ ಹೇತ್ವಲಂಕಾರವೆಂದು ಜಯದೇವನ ಮತ; ಕಾವ್ಯಲಿಂಗವೇ ಎಂದು ಕುವಲಯಾನಂದಕಾರನ ಮತ.

೬೦. ಅರ್ಥಾಂತರನ್ಯಾಸ—ಎಲ್ಲಿ ಸಾಮಾನ್ಯವಾಗಲೀ ವಿಶೇಷವಾಗಲೀ ಆಗಿರುವ ಪ್ರಸ್ತುತವಿಷಯವು ಅಪ್ರಸ್ತುತವಾದ ಬೇರೊಂದು ವಿಶೇಷವೋ ಸಾಮಾನ್ಯವೋ ಆದ ಅರ್ಥದೊಡನೆ ಉಕ್ತವಾಗಿರುವುದೋ ಅದಕ್ಕೆ ಅರ್ಥಾಂತರನ್ಯಾಸಾಲಂಕಾರವೆಂದು ಹೆಸರು.

(೧) ವಿಶೇಷವು ಪ್ರಸ್ತುತವಾಗಿರಲು ಅಪ್ರಸ್ತುತವಾದ ಸಾಮಾನ್ಯಾರ್ಥವನ್ನು ಅದರೊಡನೆ ಇಡುವುದು (ನ್ಯಾಸ) (ಉದಾ-ಪ. ೧೩೭)

(೨) ಸಾಮಾನ್ಯವು ಪ್ರಸ್ತುತವಾಗಿರಲು ಅಪ್ರಸ್ತುತವಾದ ವಿಶೇಷದ ನ್ಯಾಸ (ಉದಾ-ಪ. ೧೩೮)

(೩) ಅಪ್ರಕೃತಾರ್ಥದಿಂದ ಪ್ರಕೃತಾರ್ಥವನ್ನು ಸಮರ್ಥನ ಮಾಡುವುದೂ ಒಂದು ಭೇದವು (ಉದಾ-ಪ. ೧೩೯)

(೪) ಪ್ರಕೃತಾರ್ಥದಿಂದ ಅಪ್ರಕೃತಾರ್ಥವನ್ನು ಸಮರ್ಥನಮಾಡುವುದು (ಉದಾ-ಪ.೧೪೦)

೬೧ ವಿಕಸ್ವರ—ಎಲ್ಲಿ ಒಂದು ವಿಶೇಷಾರ್ಥವನ್ನು ಸಮರ್ಥನಮಾಡಲು ಒಂದು ಸಾಮಾನ್ಯಾರ್ಥವನ್ನು ಸೇರಿಸಿದರೂ ಅದು ಪ್ರಸಿದ್ಧವಾಗಿದರೂ ತೃಪ್ತನಾಗದೆ ಕವಿ, ಅದನ್ನು ಸಮರ್ಥಿಸುವುದಕ್ಕೆ ಉಪಮಾನರೀತಿಯಿಂದಲೋ ಅರ್ಥಾಂತರನ್ಯಾಸ ವಿಧಿಯಿಂದಲೋ ಮತ್ತೊಂದು ವಿಶೇಷಾಂತರವನ್ನು ಸೇರಿಸುವನೋ ಅದಕ್ಕೆ ವಿಕಸ್ವರಾಲಂಕಾರವೆಂದು ಹೆಸರು (ಉದಾ-ಪ. ೧೪೧)

ಉಪಮಾನರೀತಿಯಿಂದ ವಿಶೇಷಾಂತರನ್ಯಾಸ (ಉದಾ-ಪ. ೧೪೨)

ಅರ್ಥಾಂತರನ್ಯಾಸವಿಧಿಯಿಂದ (ಉದಾ-ಪ ೧೪೩)

ಮತ್ತೊಂದು ಭೇದ!(ಉದಾ-ಪ. ೧೮೪)

೬೨. ಪ್ರೌಢೋಕ್ತಿ—ಕಾರ್ಯಾತಿಶಯಕ್ಕೆ ಹೇತುವಾಗದ ವಸ್ತುವಿನಲ್ಲಿ ತದ್ಧೇತುತ್ವ ಕಲ್ಪನೆಯಿದ್ದರೆ ಪ್ರೌಢೋಕ್ತಿಯೆನಿಸುವುದು (ಉದಾ-ಪ. ೧೮೫)

೬೩. ಸಂಭಾವನೆ—ಎಲ್ಲಿ ಒಂದು ತರ್ಕಣವು ಮತ್ತೊಂದು ತರ್ಕಣಕ್ಕೆ ಸಾಧನವಾಗುವುದೋ ಅದು ಸಂಭಾವನಾಲಂಕಾರವೆನಿಸುವುದು (ಉದಾ-ಪ. ೧೮೬)

೬೪. ಮಿಥ್ಯಾಧ್ಯವಸಿತಿ—ಎಲ್ಲಿ ಒಂದನ್ನು ಶುದ್ಧಾಂಗವಾಗಿಲ್ಲವೆಂದು ಸಾಧಿಸುವುದಕ್ಕಾಗಿ ಅತ್ಯಂತಾಸಂಭವನೀಯವಾದ ಅರ್ಥವು ಕಲ್ಪಿತವಾಗಿರುವುದೋ ಅದಕ್ಕೆ ಮಿಥ್ಯಾಧ್ಯವಸಿತ್ಯಾಲಂಕಾರವೆಂದು ಹೆಸರು.

(೧) ಇದು ನಿದರ್ಶನಗರ್ಭವಾಗಿದ ರೂ ಇರಬಹುದು (ಉದಾ-ಪ. ೧೮೭) (೨) ಶುದ್ಧವಾಗಿದ್ದರೂ ಇರಬಹುದು (ಉದಾ-ಪ. ೧೮೮)

೬೫. ಲಲಿತ—ಒಂದು ಅರ್ಥವು ಪ್ರಸ್ತುತವಾಗಿರಲು ಅದಕ್ಕೆ ಸರೂಪವಾದ ಪ್ರಸ್ತುತವೃತ್ತಾಂತವನ್ನೇ ವರ್ಣಿಸುವುದು ಲಲಿತಾಲಂಕಾರವೆನಿಸುವುದು (ಉದಾ-ಪ. ೧೮೯) ಇದು ೧೯೦-೧೯೧ನೆಯ ಪದ್ಯಗಳಲ್ಲಿರುವ ರೂಪದಲ್ಲಿಯೂ ಬರಬಹುದು. ಲಲಿತಾಲಂಕಾರವನ್ನು ಇತರಾಲಂಕಾರವೆಂದು ಭ್ರಾಂತಿಬಾರದಂತೆ ನೋಡಿಕೊಳ್ಳಬೇಕು.

೬೬. ಪ್ರಹರ್ಷಣ—(೧) ಒಂದು ಅರ್ಥವು ಉತ್ಕಂಠಿತವಾಗಲು ಯತ್ನವಿಲ್ಲದೆ ಅದರ ಲಾಭವುಂಟಾಗಲು ಪ್ರಹರ್ಷಣಾಲಂಕಾರವೆನಿಸುವುದು. (ಉದಾ-ಪ.೧೯೨) (೨) ಅಭಿಲಷಿತವಾದುದಕ್ಕೆ ಅಧಿಕವಾದ ಅರ್ಥ ಸಂಸಿದ್ಧಿಯಿದ್ದರೆ ಅದೂ ಪ್ರಹರ್ಷಣವು (ಉದಾ-ಪ. ೧೯೩)

(೩) ಫಲೋಪಾಯಸಿದ್ಧಿಗಾಗಿ ಯತ್ನಿಸುತ್ತಿರಲು ಉಪಾಯಸಿದ್ಧಿಯ ಅಪೇಕ್ಷೆಯೇ ಇಲ್ಲದೆ ಸಾಕ್ಷಾತ್ಫಲವೇ ಲಾಭವಾದರೆ ಅದೂ ಪ್ರಹರ್ಷಣವು. (ಉದಾ೧೯೪)

೬೭. ವಿಷಾದನ—ಇಷ್ಟಾರ್ಥಪ್ರಾಪ್ತಿಗೆ ಅನುಕೂಲವಾದ ಯತ್ನವನ್ನು ಮಾಡಹೊರಡಲು ಅದಕ್ಕೆ ವಿರುದ್ಧವಾದಅರ್ಥಪ್ರಾಪ್ತಿಯಾದರೆ ವಿಷಾದನಾಲಂಕಾರವೆನಿಸುವುದು (ಉದಾ-ಪ. ೧೯೫)

೬೮. ಉಲ್ಲಾಸ—ಎಲ್ಲಿ (೧) ಒಂದರ ಗುಣದಿಂದ ಮತ್ತೊಂದರ ಗುಣವಾಗಲೀ (೨) ದೋಷದಿಂದ ದೋಷವಾಗಲೀ (೩) ಗುಣದಿಂದ ದೊ

ಷವಾಗಲೀ(೪)ದೋಷದಿಂದ ಗುಣವಾಗಲೀ ವರ್ಣಿತವಾಗಿರುವುದೋ ಅದಕ್ಕೆ ಉಲ್ಲಾಸಾಲಂಕಾರವೆಂದು ಹೆಸರು. ಪದ್ಯಗಳು ೧೯೬, ೧೯೭, ೧೯೮, ೧೯೯ ಈ ನಾಲ್ಕು ಭೇದಗಳಿಗೂ ಕ್ರಮವಾಗಿ ಉದಾಹರಣೆಗಳು.

೧೯ ಅವಜ್ಞೆ—(೧) ಒಂದರಗುಣದಿಂದ ಇನ್ನೊಂದಕ್ಕೆ ಗುಣವೂ (೨) ಒಂದರ ದೋಷದಿಂದ ಇನ್ನೊಂದಕ್ಕೆ ದೋಷವೂ ಆಗದಂತೆ ವರ್ಣಿತವಾಗಿದ್ದರೆ ಅವಜ್ಞಾಲಂಕಾರವೆನಿಸುವುದು. ಪದ್ಯ ೨೦೦-೨೦೧ ಇವೆರಡು ಭೇದಗಳಿಗೂ ಉದಾಹರಣೆಗಳು.

೨೦. ಅನುಜ್ಞೆ—ದೋಷವು ಅನಿಷ್ಟಕ್ಕೆ ಸಾಧನಭೂತವಾಗಿ ಕಾಣಬಂದರೂ ಅದು ಬಲವತ್ತರವಾದ ಇಷ್ಟಸಾಧನಕ್ಕೆ ಕಾರಣವಾಗುವುದರಿಂದ ಅದೇ ನಮಗಿರಲೆಂದು ಅಂಗೀಕರಿಸುವುದು ಅನುಜ್ಞಾಲಂಕಾರವಾಗುವುದು (ಉದಾ-ಪ. ೨೦೨)

೨೧ ಲೇಶ—ದೋಷವು ಗುಣದಂತೆಯೂ ಗುಣವು ದೋಷದಂತೆಯೂ ಕಲ್ಪಿತವಾಗಿದ್ದರೆ ಲೇಶಾಲಂಕಾರವಾಗುವುದು (ಉದಾ-ಪ. ೨೦೩)

೨೨. ಮುದ್ರೆ—ವಿವಕ್ಷಿತಾರ್ಥವನ್ನು ಪ್ರತಿಪಾದನ ಮಾಡತಕ್ಕ ಪದಗಳಿಂದ ಸೂಚನೀಯಾರ್ಥವನ್ನು ಸೂಚಿಸುವುದು ಮುದ್ರಾಲಂಕಾರವೆನಿಸುವುದು (ಉದಾ-ಪ. ೨೦೪)

(ಇಲ್ಲಿ ವಿಷಮಜವಾಗದು ಎಂದರೆ ವಿಷಮಸ್ಥಾನದಲ್ಲಿ ಜಗಣವು ಬರಕೂಡದು, ಕಂದ, ಮಾತ್ರಾವೃತ್ತ, ಇವುಗಳಿಂದ ಈ ಪದ್ಯವು ವಿರಚಿತವಾಗಿರುವ ಕಂದ ವೃತ್ತದ ಲಕ್ಷಣವು ಕೊಂಚ ಗೊತ್ತಾಗುವುದು)

೨೩. ರತ್ನಾವಳಿ—ಪ್ರಕೃತಾರ್ಥಗಳನ್ನು ಕ್ರಮವಾಗಿ ವಿನ್ಯಾಸಮಾಡಿದ್ದರೆ ರತ್ನಾವಳ್ಯಲಂಕಾರವೆನಿಸುವುದು. ಈ ವಿನ್ಯಾಸದಲ್ಲಿ—

(೧) ಪ್ರಸಿದ್ಧಕ್ರಮವನ್ನಾದರೂ ಅನುಸರಿಸಬಹುದು (ಉದಾ-ಪ. ೨೦೫)

(೨) ಪ್ರಸಿದ್ಧಕ್ರಮವನ್ನು ಅನುಸರಿಸದೆ ಇದ್ದರೂ ಇರಬಹುದು (ಉದಾ-ಪ. ೨೦೬)

೨೪. ತದ್ಗುಣ—ಸ್ವಗುಣಪರಿತ್ಯಾಗಮಾಡಿ ಅನ್ಯದೀಯಗುಣಸ್ವೀ

ಕಾರವಮಾಡುವಂತೆ ವರ್ಣಿತವಾಗಿದರೆ ತದ್ಗುಣಾಲಂಕಾರವೆನಿಸುವುದು (ಉದಾ-ಪ. ೨೦೭)

೭೫. ಪೂರ್ವರೂಪ--(೧)ಮೊದಲು ಸ್ವಗುಣಪರಿತ್ಯಾಗದಿಂದ ಅನ್ಯ ಗುಣಸ್ವೀಕಾರಮಾಡಿದ್ದರೂ ಮತ್ತೆ ನಿಜಗುಣಪ್ರಾಪ್ತಿಯೇ ಇರುವಂತೆ ವರ್ಣಿತವಾಗಿದ್ದರೆ ಪೂರ್ವರೂಪಾಲಂಕಾರವೆನಿಸುವುದು (ಉದಾ-ಪ. ೨೦೮)

(೨) ವಸ್ತುವಿಕಾರವನ್ನು ಹೊಂದಿದರೂ ಪೂರ್ವಾವಸ್ಥೆಯ ಅನುವೃತ್ತಿಯಿದ್ದರೆ ಅದೂ ಪೂರ್ವರೂಪವೆನಿಸುವುದು (ಉದಾ-ಪ. ೨೦೯)

೭೬ ಅತದ್ಗುಣ—ಗುಣವದ್ವಸ್ತುಸಾನ್ನಿಧ್ಯವಿದ್ದರೂ ಅದರ ಗುಣವು ಅಂಗೀಕೃತವಾಗದಿದ್ದರೆ ಅತದ್ಗುಣಾಲಂಕಾರವೆನಿಸುವುದು. (ಉದಾ-ಪ, ೨೧೦)

೭೭ ಅನುಗುಣ—ಸಜಾತೀಯಗುಣವುಳ್ಳ ಅನ್ಯವಸ್ತುವಿನ ಸಾನ್ನಿಧ್ಯದಿಂದ ಪ್ರಾಕ್ಸಿದ್ಧ (ಪೂರ್ವದಲ್ಲಿ ವಿದ್ಯಮಾನ) ವಾದತನ್ನ ಗುಣವು (ಎಂದರೆ, ಒಂದು ವಸ್ತುವಿನಗುಣವು) ಉತ್ಕೃಷ್ಟವಾದಂತೆ ವರ್ಣಿತವಾಗಿದ್ದರೆ ಅನುಗುಣಾಲಂಕಾರವೆನಿಸುವುದು (ಉದಾ-ಪ. ೨೧೧)

೭೮. ಮೀಲಿತ—ಎರಡುವಸ್ತುಗಳು ಸದೃಶವಾಗಿರುವುದರಿಂದ ಭೇದವು ಅಭಿವ್ಯಕ್ತವಾಗದೇ ಇದ್ದರೆ ಮೀಲಿತಾಲಂಕಾರವೆನಿಸುವುದು. (ಉದಾ-ಪ. ೨೧೨)

೭೯, ಸಾಮಾನ್ಯ—ಅನೇಕ ವಸ್ತುಗಳಿಗೆ ಸಾಮ್ಯವಿದ್ದು ವ್ಯಾವರ್ತಕ ಧರ್ಮವು ಕಾಣಬರದಿದ್ದರೆ ಸಾಮಾನ್ಯಾಲಂಕಾರವೆನಿಸುವುದು (ಉದಾ-ಪ. ೨೧೩)

೮೦. ಉನ್ಮೀಲಿತ—ಅತುಲ್ಯಗುಣಶಾಲಿಗಳಾದ ಎರಡು ವಸ್ತುಗಳಿಗೆ ಇರುವ ಭೇದವು ಸ್ಫೂರ್ತಿಯಾದರೆ ಉನ್ಮೀಲಿತವಾಗುವುದು (ಉದಾ-ಪ. ೨೧೪) ಇದು ಮೀಲಿತಾಲಂಕಾರಕ್ಕೆ ಪ್ರತಿದ್ವಂದ್ವಿ.

೮೧. ವಿಶೇಷಕ—ಸದೃಶವಾದ ಎರಡು ವಸ್ತುಗಳ ವೈಧರ್ಮ್ಯವು ಸ್ಫೂರ್ತಿಯಾದರೆ ವಿಶೇಷಕಾಲಂಕಾರವೆನಿಸುವುದು (ಉದಾ-ಪ. ೨೧೫) [ಇದು ಸಾಮಾನ್ಯಾಲಂಕಾರಕ್ಕೆ ಪ್ರತಿದ್ವಂದ್ವಿ]

೮೨. ಗೂಢೋತ್ತರ—ಸ್ವಲ್ಪ ಗೂಢಾಭಿಪ್ರಾಯಗರ್ಭವಾದ ಉತ್ತರ

ವಿದ್ದರೆ ಗೂಢೋತ್ತರಾಲಂಕಾರವೆನಿಸುವುದು ೧ ಪ್ರಶ್ನೆ ಉನ್ನೇಯವಾದರೂ ಆಗಬಹುದು (ಉದಾ-ಪ. ೨೧೬)

೨ ನಿಬದ್ಧಪ್ರಶ್ನೆಗೆ ಉತ್ತರವಿದ್ದರೂ ಇರಬಹುದು (ಉದಾ--) ಪ. ೨೧೭)

೮೩. ಚಿತ್ರೋತ್ತರ—ಪ್ರಶ್ನೆಯೂ ಉತ್ತರವೂ ಒಂದೇ ಆಗಿದ್ದರೂ ಚಿತ್ರೋತ್ತರಾಲಂಕಾರವೆನಿಸುವುದು (ಉದಾ-ಪ. ೨೧೮) (ಈ ಪದ್ಯದಲ್ಲಿ ಪ್ರಶ್ನೆಯೂ ಉತ್ತರವೂ ಒಂದೇ ಆಗಿರುವ ಎರಡು ಉದಾಹರಣೆಗಳೂ ಎರಡು ಪ್ರಶ್ನೆಗಳಿಗೆ ಒಂದು ಉತ್ತರವಾಗಿರುವ ಒಂದು ಉದಾಹರಣೆಯೂ ಇರುವುದು)

೮೪. ಸೂಕ್ಷ್ಮ—ತನ್ನ ಆಶಯವನ್ನು ಇಂಗಿತಾದಿಗಳಿಂದ ಮತ್ತೊಬ್ಬನು ತಿಳಿಯಲು ಅವನ ಇದಿರಿನಲ್ಲಿ ಮಾಡುವ ಸಾಕೂತ (ಎಂದರೆ ತನ್ನ ಅಭಿಪ್ರಾಯಗರ್ಭಿತವಾದ ಚೇಷ್ಟಿತವು ಸೂಕ್ಷ್ಮಾಲಂಕಾರವೆನಿಸುವುದು (ಉದಾ-ಪ. ೨೧೯)

೮೫. ಪಿಹಿತ—ಪರಕೀಯ ವ್ಯಾಪಾರವನ್ನರಿತು ಸಾಕೂತ (ಎಂದರೆ ಸ್ವಾಭಿಪ್ರಾಯಗರ್ಭಿತವಾದ ಚೇಷ್ಟಿತವು ಪಿಹಿತಾಲಂಕಾರವೆನಿಸುವುದು (ಉದಾ-ಪ. ೨೨೦)

೮೬. ವ್ಯಾಜೋಕ್ತಿ—ನಿಗೂಢವಾದ ವಸ್ತು ಪ್ರಕಟವಾಗಲು ಹೇತ್ವಂತರವನ್ನು ಕಲ್ಪಿಸಿ ಅದನ್ನು ಗೋಪನಮಾಡುವುದು ವ್ಯಾಜೋಕ್ತಿಯೆನಿಸುವುದು (ಉದಾ-ಪ. ೨೨೧)

೮೭. ಗೂಢೋಕ್ತಿ—ಒಬ್ಬನನ್ನು ಉದ್ದೇಶಿಸಿ ಹೇಳಬೇಕಾದ ಅರ್ಥವನ್ನು ಮತ್ತೊಬ್ಬನನ್ನು ಉದ್ದೇಶಿಸಿ ಶ್ಲೇಷಪೂರ್ವಕವಾಗಿ ಹೇಳಿದ್ದರೆ ಗೂಢೋಕ್ತಿಯೆನಿಸುವುದು (ಉದಾ-ಪ. ೨೨೨)

೮೮. ವಿವೃತೋಕ್ತಿ—ಶ್ಲೇಷದಿಂದ ಗುಪ್ತವಾದ ಅರ್ಥವನ್ನು ಕವಿ ತನ್ನ ಮಾತಿನಿಂದ ಸ್ಫುಟವಾಗುವಂತೆ ಮಾಡಿದ್ದರೆ ವಿವೃತೋಕ್ತಿಯೆಂದು ಹೆಸರು. ಇದರಲ್ಲಿ ಈ ಭೇದಗಳಿರುವುವು.

(೧) ಪರವಂಚನೆಗಾಗಿ ಗುಪ್ತಾವಿಷ್ಕರಣ (ಉದಾ-ಪ. ೨೨೩)

(೨) ತ್ರಪಾಗುಪ್ತಾವಿಷ್ಕರಣ (ಉದಾ-ಪ. ೨೨೪)

(೩) ಅರ್ಥಶಕ್ತಿಮೂಲಗುಪ್ತಾರ್ಥಾವಿಷ್ಕರಣ (ಉದಾ-ಪ. ೨೨೫)

(೪) ಕವಿಗುಪ್ತಾವಿಷ್ಕರಣ (ಉದಾ-ಪ. ೨೨೬)

೮೯. ಯುಕ್ತಿ—ಸ್ವಾಭಿಪ್ರಾಯರೂಪ ಮರ್ಮವನ್ನು ನಿಗೂಹನ ಮಾಡಲು ಯಾವುದಾದರೂ ಒಂದು ವ್ಯಾಪಾರದಿಂದ ಪರವಂಚನೆಯನ್ನು ಮಾಡಲು ಯುಕ್ತ್ಯಲಂಕಾರವೆನಿಸುವುದು (ಉದಾ-ಪ. ೨೨೭)

೯೦ ಲೋಕೋಕ್ತಿ—ಲೋಕಪ್ರವಾದವನ್ನು ಅನುಕರಿಸಿ ಉಲ್ಲೇಖಿಸುವುದು ಲೋಕೋಕ್ತ್ಯಲಂಕಾರವೆನಿಸುವುದು (ಉದಾ-ಪ. ೨೨೮)

೯೧ ಛೇಕೋಕ್ತಿ—ಲೋಕಪ್ರವಾದದ ಅನುವಾದವು ಒಂದು ವಸ್ತುವಿನ ವಿಷಯವಾಗಿಯೋ ಜನೀಯವಾಗಿರಲು ಮತ್ತೊಬ್ಬನಿಗೆ ತಿಳಿದ ಅರ್ಥಾಂತರ ವಿಷಯಕವಾದರೆ ಛೇಕೋಕ್ತಿಯೆನಿಸುವುದು (ಉದಾ-ಪ೨೨೯)

೯೨ ವಕ್ರೋಕ್ತಿ—ಒಬ್ಬನು ಒಂದು ಅಭಿಪ್ರಾಯವುಳ್ಳ ಮಾತನ್ನು ಹೇಳಿದರೆ ಅದಕ್ಕೆ ಬೇರೊಂದರ್ಥವನ್ನು ಕಲ್ಪಿಸುವುದು ವಕ್ರೋಕ್ತ್ಯಲಂಕಾರವೆನಿಸುವುದು ಇದರಲ್ಲಿ ಈ ಭೇದಗಳಿರುವುವು.

(೧) ಅವಿಕೃತಶಬ್ದಶ್ಲೇಷಮೂಲ (ಉದಾ-ಪ. ೨೩೦)

(೨) ವಿಕೃತಶಬ್ದಶ್ಲೇಷಮೂಲ (ಉದಾ-ಪ. ೨೩೧)

(೩) ಅರ್ಥಶ್ಲೇಷಮೂಲ (ಉದಾ-ಪ. ೨೩೨)

(೪) ಕಾಕುಮೂಲ (ಉದಾ-ಪ. ೨೩೩)

೯೩. ಸ್ವಭಾವೋಕ್ತಿ—ತಜ್ಜಾತ್ಯುಚಿತವಾದ ಸ್ವಭಾವ ವರ್ಣನವು ಸ್ವಭಾವೋಕ್ತಿಯೆನಿಸುವುದು (ಉದಾ-ಪ. ೨೩೪)

೯೪. ಭಾವಿಕ—ಕಳೆದುದಾಗಲೀ ಮುಂದೆ ಬರುವುದಾಗಲೀ ಆಗಿರುವ ಅರ್ಥವನ್ನು ಸಾಕ್ಷಾತ್ಕಾರವಾದಂತೆ ವರ್ಣನೆ ಮಾಡಿದ್ದರೆ ಭಾವಿಕಾಲಂಕಾರವೆನಿಸುವುದು (ಉದಾ-ಪ. ೨೩೫)

೯೫. ಉದಾತ್ತ—ಸಂಪತ್ಸಮೃದ್ಧಿಯುಳ್ಳುದಾಗಲೀ ಮಹಾಪುರುಷ ಸಂಬಂಧದಿಂದ ಶ್ಲಾಘ್ಯವಾದುದಾಗಲೀ ಇರುವ ಒಂದು ವಸ್ತುವನ್ನು ಸ್ಮಾರಕರೂಪವಾಗಿ ವರ್ಣಿಸಿದ್ದರೆ ಉದಾತ್ತಾಲಂಕಾರವೆನಿಸುವುದು.

(೧) ಶ್ಲಾಘ್ಯಚರಿತಾಂಗ (ಉದಾ-ಪ. ೨೩೬)

(೨) ಋದ್ಧಿಮೂಲ (ಉದಾ-ಪ. ೨೩೭)

೯೬ ಅತ್ಯುಕ್ತಿ – ಅದ್ಭುತವಾಗಿಯೂ ಅತಥ್ಯವಾಗಿಯೂ ಅಸಂಭಾವಿತವಾಗಿಯೂ ಇರುವ ಶೌರ್ಯಾದಾರ್ಯಾದಿಗಳನ್ನು ವರ್ಣಿಸುವುದು ಅತ್ಯುಕ್ತ್ಯಲಂಕಾರವು (ಉದಾ-ಪ. ೨೩೮)

೯೭. ನಿರುಕ್ತಿ… ಯೋಗವಿರಲು ಹೆಸರುಗಳಿಗೆ ಅನ್ಯಾರ್ಥತ್ವವನ್ನು ಕಲ್ಪಿಸುವುದು ನಿರುಕ್ತ್ಯಲಂಕಾರವೆನಿಸುವುದು (ಉದಾ-ಪ. ೨೩೯)

೯೮ ಪ್ರತಿಷೇಧ –ಪ್ರಸಿದ್ಧನಿಷೇಧದ ಅನುವಾದವಾಗಿದ್ದರೂ ಜಾತವಾಗಿರುವುದರಿಂದ ಅದಕ್ಕೆ ಸ್ವತಸ್ಸಿದ್ಧವಾದ ಉಪಯೋಗವಿಲ್ಲದಿದ್ದರೂ ಅರ್ಥಾಂತರಗರ್ಭೀಕಾರದಿಂದ ಚಾರುತ್ವವನ್ನುಂಟುಮಾಡಿದ್ದರೆ ಪ್ರತಿಷೇಧಾಲಂಕಾರವೆನಿಸುವುದು (ಉದಾ-ಪ. ೨೪೦)

೯೯. ವಿಧಿ—ಜ್ಞಾನಾರ್ಥವನ್ನೇ ಹೇಳಿ ಅದರಿಂದ ಸ್ವತಸ್ಸಿದ್ಧವಾದ ಪ್ರಯೋಜನವೇನೂ ಇಲ್ಲದಿದ್ದರೂ ಅಭಿಪ್ರಾಯಾಂತರವು ಗರ್ಭೀಕೃತವಾಗಿರುವಂತೆ ಇದ್ದರೆ ವಿಧ್ಯಲಂಕಾರವೆನಿಸುವುದು (ಉದಾ-ಪ. ೨೪೧)

೧೦೦ ಹೇತು—ಕಾರ್ಯಕಾರಣಗಳ ಸಹವರ್ಣನೆಯಿದ್ದರೆ ಹೇತ್ವಲಂಕಾರವೆನಿಸುವುದು. (ಉದಾ-ಪ ೨೪೨)

(೨) ಕಾರ್ಯಕಾರಣಗಳ ಅಭೇದ ವರ್ಣನೆಯನ್ನು ಕೆಲವರು ಹೇತ್ವಲಂಕಾರವೆನ್ನುವರು (ಉದಾ-ಪ. ೨೪೩)

ರಸಾಲಂಕಾರಗಳು

(೧) ವಿಭಾವಾನುಭಾವ ಸಾತ್ತ್ವಿಕ ವ್ಯಭಿಚಾರಗಳಿಂದ ಅಭಿವ್ಯಂಜಿತವಾದ ರತಿಹಾಸ ಶೋಕಾದಿ ಚಿತ್ತವೃತ್ತಿವಿಶೇಷಕ್ಕೆ ರಸವೆಂದು ಹೆಸರು. ಆ ರಸವು ಎಲ್ಲಿ ಇನ್ನೊಂದಕ್ಕೆ ಅಂಗವಾಗುವುದೋ ಅದು ರಸಾಲಂಕಾರವೆನಿಸುವುದು.

(೨) ವಿಭಾವಾನುಭಾವಗಳಿಂದ ಅಭಿವ್ಯಂಜಿತವಾಗುವುದಾಗಿಯೂ ನಿರ್ವೇದಾದಿ ಮೂವತ್ತು ಮೂರು ಭೇದಗಳುಳ್ಳದಾಗಿಯೂ ದೇವರು, ಗುರು, ಶಿಷ್ಯ, ದ್ವಿಜ, ಪುತ್ರ, ಇತ್ಯಾದಿಗಳಲ್ಲಿ ಅಭಿವ್ಯಂಜ್ಯಮಾನವಾಗುವ ರತಿಯಾಗಿಯೂ ಇರುವುದು ಭಾವವು (೩) ರಸವು ಅನೌಚಿತ್ಯದಿಂದ ಪ್ರವೃತ್ತವಾಗಿದ್ದರೆ ರಸಾಭಾಸವೆನಿಸುವುದು. ಭಾವವು ಅನೌಚಿತ್ಯದಿಂದ ಪ್ರವೃತ್ತವಾಗಿದ್ದರೆ ಭಾವಾಭಾಸವೆನಿಸುವುದು. ರಸಾಭಾಸ, ಭಾವಾಭಾಸ

ಗಳು, ಇನ್ನೊಂದಕ್ಕೆ ಅಂಗವಾಗಿದ್ದರೆ ಊರ್ಜಸ್ವಿಎಂಬ ಅಲಂಕಾರವಾಗುವುದು. (೪) ಭಾವದ ಪ್ರಶಾಮ್ಯಾದವಸ್ಥೆಗೆ ಭಾವಶಾಂತಿಯೆಂದು ಹೆಸರು.ಅದು ಇನ್ನೊಂದಕ್ಕೆ ಅಂಗವಾಗಿದ್ದರೆ ಸಮಾಹಿತಾಲಂಕಾರವೆನಿಸುವುದು. (೫+೬+೭) ಭಾವದ ಉದ್ಗಮಾವಸ್ಥೆಗೆ ಭಾವೋದಯವೆಂದು ಹೆಸರು. ಎರಡು ವಿರುದ್ಧಭಾವಗಳಿಗೆ ಪರಸ್ಪರ ಸ್ಪರ್ಧೆಯಿಲ್ಲದಿದ್ದರೆ ಭಾವಸಂಧಿಯೆಂದು ಹೆಸರು. ಬಹು ಭಾವಗಳು ಪೂರ್ವಪೂರ್ವೋಪಮರ್ದನದಿಂದ ಹುಟ್ಟಿದರೆ ಭಾವಶಬಲತ್ವವೆಂದು ಹೆಸರು ಭಾವೋದಯಾದಿಗಳು ಇತರ ಭಾವಗಳಿಗೆ ಅಂಗವಾಗಲು ಭಾವೋದಯಾದಿ ಮೂರು ಅಲಂಕಾರಗಳಾಗುವುವು. (ರಸ ಲಕ್ಷಣಾದಿಗಳು ಸಮಗ್ರವಾಗಿ ತಿಳಿದಲ್ಲದೆ ಈ ವಿಷಯವು ಕೇವಲ ಗಹನವಾಗುವುವು)

(೧) ರಸವತ್-ಪ. ೨೪೫ ಇಲ್ಲಿ ಮುನಿವಿಷಯಕವಾದ ಭಾವಕ್ಕೆ ಅದ್ಭುತರಸವು ಅಂಗವಾಗಿರುವುದು; ಪ. ೨೪೬ ಇಲ್ಲಿ ಕರುಣಾರಸಕ್ಕೆ ಶೃಂಗಾರರವು ಅಂಗವಾಗಿರುವುದು.

(೨) ಪ್ರೇಯಸ್-ಪ್ರೇಯೋಲಂಕಾರಕ್ಕೆ ಭಾವಾಲಂಕಾರವೆಂದೂ ಹೆಸರು. ಪ. ೨೪೭ ಇಲ್ಲಿ ಶಾಂತಿರಸಕ್ಕೆ ಚಿಂತೆಯೆಂಬ ವ್ಯಭಿಚಾರಿ ಭಾವವು ಅಂಗವಾಗಿರುವುದು. ಪದ್ಯ ೨೪೮. ಇಲ್ಲಿ ನರಹರಿ ವಿಷಯ ರತಿಭಾವಕ್ಕೆ ಬ್ರಹ್ಮಾಂಡ ವಿಷಯ ರತಿಭಾವವು ಅಂಗವಾಗಿರುವುದು.

(೩) ಊರ್ಜಸ್ವಿ—ಪದ್ಯ ೨೪೯. ಇಲ್ಲಿ ನರಹರಿ ರತಿಭಾವಕ್ಕೆ ಶೃಂಗಾರ ರಸಾಭಾಸವು ಅಂಗವಾಗಿರುವುದು. (ಶೃಂಗಾರವು ಪರದಾರ ವಿಷಯವಾಗುವುದು ಒಂದು ವಿಧದ ಶೃಂಗಾರಾಭಾಸವು)

ಪದ್ಯ. ೨೫೦ ಇಲ್ಲಿ ನರಹರಿ ವಿಷಯ ರತಿಭಾವಕ್ಕೆ ತದ್ವಿಯದ್ವಿಷದ್ಗಣ ರತಿರೂಪವಾದ ಭಾವಾಭಾಸವು ಅಂಗವಾಗಿರುವುದು.

(೪) ಸಮಾಹಿತ—ಪದ್ಯ-೨೫೧ ಇಲ್ಲಿ ಶೃಂಗಾರಕ್ಕೆ ಕೋಪಶಾಂತಿ ಅಂಗವಾಗಿರುವುದು

(೫) ಭಾವೋದಯ—ಪದ್ಯ ೨೫೨. ಇಲ್ಲಿ ಶಮೋದಯವಿರುವುದು.

(೬) ಭಾವಸಂಧಿ—ಪದ್ಯ ೨೫೨. ಇಲ್ಲಿ ಆಸಂದೌತ್ಸುಕ್ಯಗಳ ಸಂಧಿ

(೭) ಭಾವಶಬಲ—ಪದ್ಯ ೨೫೪. ಇಲ್ಲಿ ವಿತರ್ಕ, ಔತ್ಸುಕ್ಯ; ಮತಿ, ಸ್ಮರಣ, ಧೈರ್ಯ, ಇವುಗಳ ಶಬಲತ್ವವಿರುವುದು.

ಪ್ರಮಾಣಾಲಂಕಾರಗಳು

(೮) ಪ್ರತ್ಯಕ್ಷ—ಪದ್ಯ-೨೫೫. ಇಲ್ಲಿ ಪ್ರತ್ಯಕ್ಷ ಮಾತ್ರವಿರುವುದು.

ಪದ್ಯ-೨೫೬ ಇಲ್ಲಿ ವಿಶೇಷದರ್ಶನ ಜನ್ಯವಾದ ಸಂಶಯೋತ್ತರ ಪ್ರತ್ಯಕ್ಷವಿರುವುದು.

(೯) ಅನುಮಾನ (ಊಹೆ)—ಪದ್ಯ-೨೫೭ ಅಲಂಕಾರ (ಇಲ್ಲಿ ಉತ್ಪ್ರೇಕ್ಷೆ) ಗರ್ಭಿತವಾದ ಅನುಮಾನ.

ಪದ್ಯ-೨೫೮ ಇಲ್ಲಿ ಶುದ್ಧಾನುಮಾನವಿರುವುದು.

(೧೦) ಉಪಮಾನ—ಪದ್ಯ-೨೫೯ ಇಲ್ಲಿ ಉಪಮಾನ ಮೂಲಭೂತವಾದ ಅತಿದೇಶವಾಕ್ಯವಿರುವುದು

ಪದ್ಯ-೨೬೦ ಇಲ್ಲಿ ಅತಿದೇಶವಾಕ್ಯಗಳಿಂದ ಅರ್ಥಸಾದೃಶ್ಯ ಪ್ರತ್ಯಕ್ಷ ರೂಪವಾದ ಉಪಮಾನವು ಫಲದೊಡನೆ ತೋರಲ್ಪಟ್ಟಿರುವುದು.

(೧೧) ಶಬ್ದಪ್ರಮಾಣ—ಪದ್ಯ-೨೬೧ ಇಲ್ಲಿ ಶ್ರುತಿಪ್ರಮಾಣ ('ತಸ್ಮಾದ್ವಿರಾಳಜಾಯತ' ವೇದ)

ಪದ್ಯ-೨೬೨ ಇಲ್ಲಿ ಸ್ಮೃತಿಪ್ರಮಾಣ ('ವೃದ್ಧೌಚಮಾತಾ ಪಿತರಾ ಸಾಧ್ವೀಭಾರ್ಯಾ ಸುತಶ್ಶಿಶುಃ। ಅಪ್ಯಕಾರ್ಯಶತಂಕೃತ್ವಾ ಭರ್ತವ್ಯಾಮನುರಬ್ರವೀತ್ ॥' ಸ್ಮೃತಿ)

ಪದ್ಯ-೨೬೩ ಇಲ್ಲಿ ಶಿಷ್ಟಾಚಾರಪ್ರಮಾಣ.

ಪದ್ಯ-೨೬೪ ಇಲ್ಲಿ ಆತ್ಮತುಷ್ಟಿಪ್ರಮಾಣ.

ಪದ್ಯ-೨೬೫ ಇಲ್ಲಿ ಶ್ರುತಿ (ಶ್ರುತಿಯೆಂದರೆ ಇಲ್ಲಿ ಇತರ ವಾಕ್ಯಾಪೇಕ್ಷೆಯಿಲ್ಲದೆ ತಾನೇ ಸಂಪೂರ್ಣಾರ್ಥವನ್ನು ಕೊಡುವ ವಾಕ್ಯವೆಂದು ಅರ್ಥವು)

ಪದ್ಯ-೨೬೬ ಇಲ್ಲಿ ಲಿಂಗ (ಲಿಂಗವೆಂದರೆ ಇತರ ವಾಕ್ಯದ ಅರ್ಥವನ್ನು ನಿರ್ಣಯಿಸುವುದಕ್ಕೆ ಒಂದು ವಾಕ್ಯದಿಂದ ತೋರಬರುವ ಹೆಗ್ಗುರುತು)

ಪದ್ಯ-೨೬೭ ಇಲ್ಲಿ ಶಬ್ದಪ್ರಮಾಣವನ್ನು ಮುಂದಿಟ್ಟುಕೊಂಡು ಚಮತ್ಕಾರಕಾರಿತ್ವವಿರುವುದು.

(೧೨) ಅರ್ಥಾಪತ್ತಿ—ಪದ್ಯ-೨೬೮,

(೧೩) ಅನುಪಲಬ್ಧಿ—ಪದ್ಯ-೨೬೯.

(೧೪) ಸಂಭವ—ಪದ್ಯ-೨೭೦ ಇಲ್ಲಿ ಸಂಭವ ಪ್ರಮಾಣಸಿದ್ಧವಾದ ಅರ್ಥವು ಉಕ್ತವಾಗಿರುವುದು.

ಪದ್ಯ-೨೭೧ ಇಲ್ಲಿ ಸಂಭವೋಪಪಾದಕವಾದ ಕಾಲಾನಂತ್ಯಾದಿಗಳು ಉಕ್ತವಾಗಿರುವುವು

ಪದ್ಯ-೨೭೨ ಇಲ್ಲಿ ಸಂಭವವೂ ಕಂಠೋಕ್ತವಾಗಿರುವುದು.

(೧೫) ಐತಿಹ್ಯ—ಪದ್ಯ-೨೭೩.

ಸಂಸೃಷ್ಟಿಸಂಕರಗಳು

ಈ ಅಲಂಕಾರಗಳು ಯಥಾ ಸಂಭವವಾಗಿ ಕೆಲವು ಸೇರುವುದರಿಂದ ಲೌಕಿಕಾಲಂಕಾರಗಳ ಮೇಳನದಂತೆಯೇ ಚಾರುತ್ವಾತಿಶಯವುಂಟಾಗುವುದರಿಂದ ನರಸಿಂಹ ನ್ಯಾಯದಿಂದ ಪೃಥಗಲಂಕಾರಗಳಾಗುವುವು. ಎಲ್ಲಿ ಮಿಳಿತವಾಗಿರುವ ಅಲಂಕಾರಭೇದಗಳು ತಿಲತಂಡುಲ ನ್ಯಾಯದಿಂದ ಸ್ಫುಟಾವಗಮ್ಯಮಾನಗಳಾಗಿರುವುವೋ ಸಂಸೃಷ್ಟಿ ಎಲ್ಲಿ ಸಂಸೃಷ್ಟಿ ಎಲ್ಲಿ ನೀರಕ್ಷೀರನ್ಯಾಯದಿಂದ ಅಸ್ಫುಟಗಳಾಗಿರುವುವೋ ಅಲ್ಲಿ ಸಂಕರ

(೧೬) ಸಂಸೃಷ್ಟಿ—ಪದ್ಯ-೨೭೪ ಇಲ್ಲಿ ಶಬ್ದಾಲಂಕಾರಗಳಾದ ಅನುಪ್ರಾಸಯಮಕಗಳ ಸಂಸೃಷ್ಟಿ

ಪದ್ಯ-೨೭೫ ಇಲ್ಲಿ ಎರಡು ಉತ್ಪ್ರೇಕ್ಷೆಗಳಿಗೂ ಉಪಮಾಲಂಕಾರಕ್ಕೂ ಸಂಸೃಷ್ಟಿ.

ಪದ್ಯ-೨೭೬ ಇಲ್ಲಿ ಶಬ್ದಾಲಂಕಾರಾರ್ಥಾಲಂಕಾರಗಳ ಸಂಸೃಷ್ಟಿ

(೧೭) ಅಂಗಾಂಗಿಭಾವಸಂಕರ—ಪದ್ಯ-೨೭೭.

(೧೮) ಸಮಪ್ರಾಧಾನ್ಯಸಂಕರ—ಪದ್ಯ-೨೭೮.

(೧೯) ಸಂದೇಹಸಂಕರ—ಪದ್ಯ-೨೭೯.

(೨೦) ಏಕವಾಚಕಾನುಪ್ರವೇಶಸಂಕರ—ಪದ್ಯ-೨೮೦. ಶಬ್ದಾರ್ಥಾಲಂಕಾರಗಳು ಒಂದೇ ಸ್ಥಳದಲ್ಲಿ ಕಾಣಬರುವುದು.

ಭದ್ರಂ ಭೂಯಾತ್